# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜನವರಿ 08, 2025

ಸಂಪುಟ : 51 ಸಂಚಿಕೆ : 236 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಜಿಲ್ಲಾಧಿಕಾರಿ ಕಚೇರಿ ಎದುರು ಶಾಸಕ ಶಿವಗಂಗಾ ಬಸವರಾಜ್ ಪ್ರತಿಭಟನೆ

**ನಲ್ಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಅಕ್ರಮ ಎಂದು ಶಾಸಕ ಆರೋಪ**

**ಚುನಾವಣೆ ಮುಂದೂಡಿದ ಡಿಸಿ ಅಕ್ರಮ ತನಿಖೆಗೆ ಆದೇಶ**

ದಾವಣಗೆರೆ, ಜ.7 - ಚನ್ನಗಿರಿ ತಾಲ್ಲೂಕು ನಲ್ಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಅಕ್ರಮ ಮತದಾನಕ್ಕೆ ಸಹಕಾರ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಚನ್ನಗಿರಿ ಶಾಸಕ ಬಸವರಾಜ್ ವಿ. ಶಿವಗಂಗಾ ಹಾಗೂ ಅವರ ಬೆಂಬಲಿಗರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಚನ್ನಗಿರಿ ತಾಲ್ಲೂಕಿನ ನಲ್ಲೂರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಜನವರಿ 12 ರಂದು ಚುನಾವಣೆ ನಡೆಯಲಿದೆ. ಆದರೆ ಸಹಕಾರ ಸಂಘದ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳು ಸೇರಿಕೊಂಡು ಸಭೆಗೆ ಹಾಜರಾಗದೇ ಇರುವ ಸಾಕಷ್ಟು ಜನ ಸದಸ್ಯರ ಸಹಿಯನ್ನು ಅವರೇ ಮಾಡಿದ್ದಾರೆ. ಅಷ್ಟೇ ಅಲ್ಲದೇ ಮೂರು ಸಭೆಗಳಿಗೆ ಹಾಜರಾಗದೇ ಇರುವ ಜಾಗದಲ್ಲಿ ವೈಟ್ನರ್ ಹಾಕಿ ತಿದ್ದಿದ್ದಾರೆಂದು ಶಾಸಕ ಶಿವಗಂಗಾ ಬಸವರಾಜ್ ಆರೋಪಿಸಿದರು.

ಸಂಘಕ್ಕೆ ಚುನಾವಣೆಗೆ ಸಿದ್ದಪಡಿಸಿರುವ ಮತದಾರರ ಪಟ್ಟಿಯನ್ನೂ ಅಧಿಕಾರಿಗಳು ತಿದ್ದಿದ್ದಾರೆ. ಅಕ್ರಮ ಎಸಗಿದ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಿ ಚುನಾವಣೆ ರದ್ದು ಮಾಡುವಂತೆ ಆಗ್ರಹಿಸಿದರು.

ಇದೇ ವಿಷಯವಾಗಿ ಸೋಮವಾರ ಎರಡು ಬಣಗಳ ನಡುವೆ ನಲ್ಲೂರಿನ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೈಕೈ ಮಿಸಲಾಯಿಸುವ ಹಂತಕ್ಕೆ ತಲುಪಿತ್ತು. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದೂರು ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಅಕ್ರಮ ಮಾಡಿದ ನಾಲ್ಕು ಜನ ಅಧಿಕಾರಿಗಳನ್ನು (4ನೇ ಪುಟಕ್ಕೆ)

# ಎಸ್ಸಿ-ಎಸ್ಟಿ ಅನುದಾನ ಅಸಮರ್ಪಕ ಬಳಕೆ

## ಅಧಿಕಾರಿಗಳಿಗೆ ನೋಟಿಸ್ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ

ಬೆಂಗಳೂರು,ಜ. 7- ಪರಿಶಿಷ್ಟ ಜಾತಿ ಹಾಗೂ ವರ್ಗದ ಅಡಿ ಬರುವ ನಿಗಮಗಳಲ್ಲಿ ಹಣ ವೆಚ್ಚ ಮಾಡದೆ, ಮಜಾ ಮಾಡುತ್ತಿರುವ ಎಂಡಿಗಳಿಗೆ ತಕ್ಷಣ ನೋಟಿಸ್ ನೀಡಿ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಇಂದಿಲ್ಲಿ ಆದೇಶ ಮಾಡಿದ್ದಾರೆ.

ತಾವು ಕೈಗೊಂಡಿದ್ದ ದೆಹಲಿ ಪ್ರವಾಸ ರದ್ದಾದ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನೆ ಮಾಡಿದ ಮುಖ್ಯಮಂತ್ರಿಗಳು, ಡಾ.ಅಂಬೇಡ್ಕರ್ ನಿಗಮದಲ್ಲಿ 900 ಕೋಟಿ ರೂ., ಭೋವಿ ನಿಗಮದಲ್ಲಿ 107 ಕೋಟಿ ರೂ. ಸೇರಿದಂತೆ ಹಲವು ನಿಗಮಗಳಲ್ಲಿ ಕೋಟಿ ಕೋಟಿ ಹಣ ಇದ್ದರೂ ವೆಚ್ಚ ಮಾಡದಿರುವುದಕ್ಕೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ಈ ಆದೇಶ ಮಾಡಿದರು.

> ❛ವರ್ಷಾಂತ್ಯದವರೆಗೆ ವಿದ್ಯಾರ್ಥಿ ವೇತನ ಪಾವತಿ ಬಾಕಿ ಉಳಿಸಬಾರದು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಪ್ರತಿ ವರ್ಷ ಸೆಪ್ಟಂಬರ್ ಒಳಗೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನವೆಂಬರ್ ಅಂತ್ಯದ ಒಳಗೆ ಪಾವತಿಸಲು ಕ್ರಮ ಕೈಗೊಳ್ಳಬೇಕು, ಆಧಾರ್ ದಾಖಲೆ ಆಗದಿರುವ ಕಾರಣಕ್ಕೆ ವಿದ್ಯಾರ್ಥಿ ವೇತನ ವಿಳಂಬವಾಗಬಾರದು, ಎಲ್ಲಾ ವಿದ್ಯಾರ್ಥಿಗಳಿಗೆ ಆಧಾರ್ ಮಾಡಿಸಲು ಕ್ರಮ ಕೈಗೊಳ್ಳಬೇಕು.



ಫಲಾನುಭವಿಗಳಿಗೆ ಮೀಸಲಿಟ್ಟ ಹಣವನ್ನು ವೆಚ್ಚ ಮಾಡದೆ, ಬ್ಯಾಂಕ್ ಖಾತೆಗಳಲ್ಲಿ ಇಟ್ಟುಕೊಂಡು ಏನು ಮಾಡುತ್ತಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದರು.

ಈ ಸಂಬಂಧ ಎಲ್ಲಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಜಾರಿ ಮಾಡಿ, ನೋಟಿಸ್‌ಗೆ ಸಮರ್ಪಕ ಉತ್ತರ ದೊರೆಯದಿದ್ದರೆ, ಅವರನ್ನು ತಕ್ಷಣ ಅಮಾನತು ಮಾಡುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿದರು.

ಹಣಕಾಸು ವರ್ಷದ ಕೊನೆ ತಿಂಗಳಲ್ಲೇ ಖರ್ಚು ಮಾಡುವ ಅಸಹ್ಯ ಅಭ್ಯಾಸ ಬೆಳೆಸಿಕೊಂಡಿದ್ದೀರಿ, ಬಡವರಿಗೆ, ಅರ್ಹ ಫಲಾನುಭವಿಗಳಿಗೆ ಹಂಚಲು ಕೊಟ್ಟ ಹಣ ಖರ್ಚು ಮಾಡದೆ ಇಟ್ಟುಕೊಂಡು ಕೂರುವು ದಕ್ಕಾ ನೀವು ಇರುವುದು ಎಂದು ಗುಡುಗಿದರು.

2024-25ನೇ ಸಾಲಿನ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 5,377 ಕೋಟಿ ರೂ. ಅನುದಾನ ಒದಗಿಸಲಾಗಿದೆ, ಅದರಲ್ಲಿ 3,631 ಕೋಟಿ ರೂ. ಬಿಡುಗಡೆಯಾಗಿದ್ದು, ಈ ಮೊತ್ತವೂ ಪೂರ್ತಿ ಖರ್ಚು ಏಕೆ ಆಗಿಲ್ಲ ಎಂದು ಪ್ರಶ್ನಿಸಿದರು. ಇಲಾಖೆಗೆ ಕೊಟ್ಟ ಹಣದಲ್ಲಿ 2,892 ಕೋಟಿ ರೂ. ಮಾತ್ರ ವೆಚ್ಚ ಮಾಡಲಾಗಿದೆ, ಉಳಿದ ಹಣ ವೆಚ್ಚಕ್ಕೆ ಮಾರ್ಚ್ ಅಂತ್ಯದವರೆಗೆ ಕಾಯದೆ, ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಮರ್ಪಕ ವೆಚ್ಚ ಮಾಡಲು ಕ್ರಮ ಕೈಗೊಳ್ಳಬೇಕು.


ಎಲ್ಲಾ ಹೋಬಳಿಗಳಲ್ಲಿ ವಸತಿ ಶಾಲೆ ಸ್ಥಾಪನೆ ಸರ್ಕಾರದ ಗುರಿಯಾಗಿದೆ, ಈ ವರ್ಷ 20 ಹೊಸ ವಸತಿ ಶಾಲೆ ಆರಂಭಿಸಲಾಗಿದೆ, ರಾಜ್ಯದಲ್ಲಿ ಒಟ್ಟು 841 ವಸತಿ ಶಾಲೆಗಳಿವೆ, ಇನ್ನೂ 92 ಹೋಬಳಿಗಳಲ್ಲಿ ವಸತಿ ಶಾಲೆ ಆರಂಭಿಸಬೇಕಿದೆ, ಮುಂದಿನ ಎರಡು ವರ್ಷದಲ್ಲಿ ಇವನ್ನು ಪೂರ್ಣಗೊಳಿಸಬೇಕು.

ಹೊಸದಾಗಿ ಆರಂಭಿಸಲಾದ ಎಲ್ಲಾ ವಸತಿ ಶಾಲೆಗಳಲ್ಲಿ ಶಿಕ್ಷಕರು ಸೇರಿದಂತೆ ಅಗತ್ಯ ಮೂಲಸೌಕರ್ಯ ಒದಗಿಸಿ ಗುಣಮಟ್ಟದ ಶಿಕ್ಷಣ ನೀಡಬೇಕು. ಮಂಜೂರಾದ ಎಲ್ಲಾ ಹುದ್ದೆಗಳ ಭರ್ತಿಗೆ ಕ್ರಮ (4ನೇ ಪುಟಕ್ಕೆ)

## ಎಚ್‌ಎಂಪಿ ವೈರಸ್: ತೀವ್ರ ನಿಗಾ ವಹಿಸಲು ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಸೂಚನೆ

ಬೆಂಗಳೂರು,ಜ.7- ಎಚ್‌ಎಂಪಿ ವೈರಾಣು (ಹ್ಯೂಮನ್ ಮೆಟಾನ್ಯೂಮೋ ವೈರಸ್) ಬಗ್ಗೆ ತೀವ್ರ ನಿಗಾ ವಹಿಸುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ.

ಕರ್ನಾಟಕ ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ಎಚ್‌ಎಂಪಿ ವೈರಾಣು ಪ್ರಕರಣಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯ ದೆಹಲಿಯಲ್ಲಿಂದು ರಾಜ್ಯ ಸರ್ಕಾರಗಳಿಗೆ ಕೆಲವು ಮಾರ್ಗಸೂಚಿಗಳನ್ನು ಅನುಸರಿಸುವಂತೆ ತಿಳಿಸಿದೆ. ಉಸಿರಾಟ ಸಂಬಂಧಿ ಕಾಯಿಲೆ ಮತ್ತು ಎಚ್‌ಎಂಪಿವಿ ಪ್ರಕರಣಗಳ ನಿರ್ವಹಣೆಗಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಹೇಳಿದೆ.



ಚೀನಾದಲ್ಲಿ ಈ ವೈರಾಣು ಪ್ರಕರಣಗಳು ಏರಿಕೆ ಆಗುತ್ತಿರುವ ಬೆನ್ನಲ್ಲೇ ರಾಷ್ಟ್ರದ ಐದು ರಾಜ್ಯಗಳಲ್ಲಿ ಪ್ರಕರಣ ಪತ್ತೆಯಾಗಿದೆ, ಮುಂದಿನ ದಿನಗಳಲ್ಲಿ ವೈರಾಣು ಹರಡದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು.

ಅಲ್ಲದೆ, ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಸಿರಾಟ ಸಮಸ್ಯೆ ಸಂಬಂಧಿ ಕಾಯಿಲೆ ಪತ್ತೆ ಮತ್ತು ಚಿಕಿತ್ಸೆಗೆ ಪ್ರತ್ಯೇಕ ವಿಭಾಗಗಳನ್ನು (2ನೇ ಪುಟಕ್ಕೆ)

## ಫೆಬ್ರವರಿ 5ರಂದು ದೆಹಲಿ ವಿಧಾನಸಭಾ ಚುನಾವಣೆ

ನವದೆಹಲಿ, ಜ. 7- ದೆಹಲಿ ವಿಧಾನಸಭೆಗೆ ಫೆಬ್ರವರಿ 5ರಂದು ಚುನಾವಣೆ ನಡೆಯಲಿದೆ ಹಾಗೂ ಫೆಬ್ರವರಿ 8ರಂದು ಮತಗಳ ಎಣಿಕೆ ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಪ್ರಕಟಿಸಿದ್ದಾರೆ.

ನಾಮಪತ್ರ ಸಲ್ಲಿಸಲು ಜನವರಿ 17 ಕೊನೆಯ ದಿನವಾಗಿದೆ. ಜನವರಿ 18ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ವಾಪಾಸ್ ಪಡೆಯಲು ಜನವರಿ 20 ಕೊನೆಯ ದಿನವಾಗಿದೆ.

ಒಂದೇ ಹಂತದಲ್ಲಿ ಚುನಾವಣೆ ನಡೆಸಲಾಗುವುದು. ಹೆಚ್ಚು ಜನ ಮತದಾನ ಮಾಡುವಂತಾಗಲಿ (4ನೇ ಪುಟಕ್ಕೆ)

## ಜನತೆಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ: ಸಚಿವ ಎಸ್ಸೆಸ್ಸೆಂ

### ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ, ಹೊಲಿಗೆ ಯಂತ್ರ ವಿತರಣೆ, ಟ್ರ್ಯಾಕ್ಟರ್ ಲೋಕಾರ್ಪಣೆ

ದಾವಣಗೆರೆ, ಜ.7- ಬೆಂಗಳೂರು ನಗರವನ್ನು ಮೀರಿಸುವಂತಹ ಕಾಮಗಾರಿಗಳು ದಾವಣಗೆರೆ ಜಿಲ್ಲೆಯಲ್ಲಾಗಬೇಕು ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ತಿಳಿಸಿದರು.

ಮಹಾನಗರ ಪಾಲಿಕೆ ಆವರಣದಲ್ಲಿ ವಿವಿಧ ವಾರ್ಡ್ ಗಳಲ್ಲಿ ಕೈಗೊಳ್ಳಲಾದ ರೂ.8.05 ಕೋಟಿ ಮೊತ್ತದ ಕಾಮಗಾರಿಗಳ ಗುದ್ದಲಿ ಪೂಜೆ ಹಾಗೂ 500 ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳ ವಿತರಣೆ, ಘನತ್ಯಾಜ್ಯ ನಿರ್ವಹಣೆಗಾಗಿ 10 ಟ್ರ್ಯಾಕ್ಟರ್ ಗಳ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ ನುಡಿದಂತೆ ನಡೆದಿದ್ದೇವೆ. ಜನತೆಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಬಡವರ ಅಭಿವೃದ್ಧಿಗಾಗಿ ಕಾಂಗ್ರೆಸ್ ಸದಾ ಮುಂದಿದ್ದು,



ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿನ ನಮ್ಮ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಜನತಗೆ ಉಪಯುಕ್ತವಾಗಿವೆ.

ನಮ್ಮ ಅಧಿಕಾರದಲ್ಲಿಯೇ ಪಾಲಿಕೆಯ ವ್ಯಾಪ್ತಿ ಉತ್ತಮ ರಸ್ತೆಗಳನ್ನು ನಿರ್ಮಿಸಿದ್ದೇವೆ. ಅವುಗಳನ್ನು ನಿರ್ವಹಣೆ ಮಾಡಿಕೊಂಡು ಹೊದರೆ ರಸ್ತೆ ಸಮಸ್ಯೆಗಳು ತಪ್ಪುತ್ತವೆ. ಸಿಮೆಂಟ್ ರಸ್ತೆಗಳ ಪಕ್ಕದ ಸರ್ವಿಸ್, ಒಳ ರಸ್ತೆಗಳ ನಿರ್ಮಾಣ, ಯುಜಿಡಿ ಲೈನ್ ಹಾಗೂ ಮೂಲ ಸೌಕರ್ಯವನ್ನು ಬಡ ಜನತೆಗೆ ನೀಡುವಲ್ಲಿ ಪಾಲಿಕೆ ಸದಸ್ಯರು ಮುಂದಾಗಬೇಕು ಎಂದರು.

ಪಾಲಿಕೆಯಿಂದ 1500 ಹೊಲಿಗೆ ಯಂತ್ರಗಳನ್ನು ನೀಡಲಾಗಿದೆ. ಮುಂದೆ ನೂತನ ತಂತ್ರಜ್ಞಾನವನ್ನು ಅಳವಡಿಸಿ ಮಹಿಳೆಯರಿಗೆ ಎಂಬ್ರಾಡರಿ ಮಿಷನ್, ವಾಷಿಂಗ್ ಮಿಷನ್, ಗುಡಿ ಕೈಗಾರಿಕೆಯಂತಹ ಸೇವೆಗಳಾಗಬೇಕು ಎಂದರು.

ಕುಂದುವಾಡ ಕೆರೆ, ಟಿವಿ ಸ್ಟೇಷನ್ ಕೆರೆಗಳ ನಿರ್ಮಾಣದಿಂದ ಕುಡಿಯುವ ನೀರಿನ ಬವಣೆ ನೀಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ 250 ಪೌರ ಕಾರ್ಮಿಕರ ಸೇವೆ ಖಾಯಂ ಮಾಡಲಾಗಿದೆ. ಉಳಿದ 24 ಪೌರ ಕಾರ್ಮಿಕರ ಸೇವೆ ಖಾಯಂ ಮಾಡುವ ಪ್ರಸ್ತಾವನೆ ಬಾಕಿ ಇದೆ. ಪಾಲಿಕೆ ವ್ಯಾಪ್ತಿಯಲ್ಲಿನ ಇನ್ನಷ್ಟು ಅಭಿವೃದ್ಧಿಗೆ ಮಹಾತ್ಮ ಗಾಂಧಿ ಯೋಜನೆಯಡಿ 125 ಕೋಟಿ ಅನುದಾನದಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.

ನಾವು ಪಾಲಿಕೆಯ ಯಾವ ಸದಸ್ಯರಿಗೂ ಬಿಜೆಪಿ ಪಕ್ಷದವರಂತೆ (4ನೇ ಪುಟಕ್ಕೆ)

## ಬಾಣಂತಿಯರ ಚಿಕಿತ್ಸೆಗೆ ನಿರ್ಲಕ್ಷ್ಯ

### ಆರೋಗ್ಯ ಸಚಿವ ರಾಜೀನಾಮೆಗೆ ಸತ್ಯಶೋಧನಾ ಸಮಿತಿ ಆಗ್ರಹ

ದಾವಣಗೆರೆ, ಜ. 7- ರಾಜ್ಯದಲ್ಲಿ ಬಾಣಂತಿಯರ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ತೀವ್ರ ನಿರ್ಲಕ್ಷ್ಯ ವಹಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡುರಾವ್ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಸತ್ಯಶೋಧನ ಸಮಿತಿ ಸದಸ್ಯ, ಶಾಸಕ ಡಾ. ಚಂದ್ರು ಲಮಾಣಿ ಆಗ್ರಹಿಸಿದ್ದಾರೆ.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎಂಟು ತಿಂಗಳಿನಲ್ಲಿ ರಾಜ್ಯದಲ್ಲಿ 600ಕ್ಕೂ ಅಧಿಕ ಬಾಣಂತಿಯರು ಮತ್ತು ಸಾವಿರಕ್ಕೂ ಹೆಚ್ಚು ನವಜಾತ ಶಿಶು ಮರಣ ಹೊಂದಿದ್ದಾರೆ. ಇದಕ್ಕೆ ಆರೋಗ್ಯ ಸಚಿವರ ನಿರ್ಲಕ್ಷ್ಯ ಧೋರಣೆಯೇ ಕಾರಣ ಎಂದು ಆರೋಪಿಸಿದರು.

ಮೃತ ಬಾಣಂತಿಯರಿಗೆ 5 ಲಕ್ಷ ರೂ. ಪರಿಹಾರ ಕೊಡುವುದಾಗಿ ಬೆಳಗಾವಿ ಅಧಿವೇಶನದಲ್ಲಿ ಸಚಿವರು ತಿಳಿಸಿದ್ದಾರೆ. ಮಕ್ಕಳನ್ನು ನೋಡಿಕೊಳ್ಳಲು 2 ಸಾವಿರ ನೀಡುವುದಾಗಿ ಹೇಳಿದ್ದಾರೆ. ಇಲ್ಲಿನವರೆಗೆ (4ನೇ ಪುಟಕ್ಕೆ)

## ಟಿಬೆಟ್‌ನಲ್ಲಿ 6.8ರಷ್ಟು ತೀವ್ರತೆ ಭೂಕಂಪ, 95 ಸಾವು

ಬೀಜಿಂಗ್, ಜ. 7- ಟಿಬೆಟ್‌ನಲ್ಲಿ ರಿಕ್ಟರ್ ಮಾಪಕದಲ್ಲಿ 6.8ರಷ್ಟಿರುವ ಭೂಕಂಪ ಸಂಭವಿಸಿದ್ದು, ಕನಿಷ್ಟ 95 ಜನ ಸಾವನ್ನಪ್ಪಿದ್ದಾರೆ ಹಾಗೂ 130 ಜನ ಗಾಯಗೊಂಡಿದ್ದಾರೆ. ಭೂಕಂಪ ಹಾಗೂ ಪಶ್ಚಾತ್ ಕಂಪನಗಳ ಕಾರಣದಿಂದ ಹಲವು ಕಟ್ಟಡಗಳಿಗೆ ಹಾನಿಯಾಗಿದೆ.

ಚೀನಾದ ಟಿಬೆಟ್ ಸ್ವಾಯತ್ತ ವಲಯದಲ್ಲಿರುವ ಡಿಂಗ್ರಿ ಕೌಂಟಿ ಎಂಬಲ್ಲಿ ಭೂಕಂಪ ಸಂಭವಿಸಿದೆ. ಬೆಳಗ್ಗೆ 9.05ರ ಸಮಯದಲ್ಲಿ (2ನೇ ಪುಟಕ್ಕೆ)


ಹೃತ್ಪೂರ್ವಕ ಕೃತಜ್ಞತೆಗಳು

ಹರಿಹರ ತಾಲೂಕು ಬೆಳ್ಳೂಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬೆಳ್ಳೂಡಿ ಇದರ 2025–30ನೇ ಸಾಲಿನ ಅವಧಿಗೆ 04–01–2025ರಂದು ನಡೆದ ಆಡಳಿತ ಮಂಡಳಿಯ (ಸಾಲಗಾರರ ಕ್ಷೇತ್ರದ) ನಿರ್ದೇಶಕರ ಚುನಾವಣೆಯಲ್ಲಿ ಅತ್ಯಧಿಕ (280 ಕ್ಕೆ 258) ಮತ ಪಡೆದು ಪ್ರಚಂಡ ಬಹುಮತ ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ಸಂಘದ ಸಮಗ್ರ ಅಭಿವೃದ್ಧಿಗೆ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟ ನನ್ನ ಮತದಾರ ಬಾಂಧವರಿಗೆ ಹಾಗೂ ಬೆಳ್ಳೂಡಿ ಮತ್ತು ಶಂಶೀಪುರ (ಶಿವನಹಳ್ಳಿ) ಗ್ರಾಮಗಳ ಗ್ರಾಮಸ್ಥರಿಗೆ ಹಾಗೂ ಸಂಘದ ಹಾಲಿ ಮತ್ತು ಮಾಜಿ ನಿರ್ದೇಶಕರುಗಳಿಗೂ ನನ್ನ ಗೆಲುವಿಗೆ ಶ್ರಮಿಸಿದ ನನ್ನ ಸ್ನೇಹಿತರಿಗೂ ಹಾಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಗುರು–ಹಿರಿಯರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.





ಶ್ರೀ ಸಿದ್ಧಾರ್ಥ್ ಜಿ.ಬಿ.
ನಿರ್ದೇಶಕರು
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಬೆಳ್ಳೂಡಿ



ಒಂಭತ್ತನೇ ವರ್ಷದ ಪುಣ್ಯಸ್ಮರಣೆ ಹಾಗೂ ಗುರು ವಂದನೆ





ಡಾ|| ನಿರ್ಮಲಾ ಕೇಸರಿ

ಜನನ : 14.09.1930 ಲಿಂಗೈಕ್ಯ : 08.01.2016

*ಇಂದಿಗೆ ತಾವು ನಮ್ಮನ್ನಗಲಿ 9 ವರ್ಷಗಳಾದವು... ಸದಾ ಮಕ್ಕಳ ವೈದ್ಯರಿಗೆ ಹಾಗೂ ಸಮಸ್ತ ಸಮಾಜಕ್ಕೆ ಪ್ರೇರಣೆಯಾಗಿರುವ ಪ್ರೀತಿಯ ಮೇಡಂರವರಿಗೆ ನಮ್ಮೆಲ್ಲರ ನಲುಮೆಯ ಹಾಗೂ ಭಕ್ತಿಪೂರ್ವಕ ಗುರು ವಂದನೆ...*

✦ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರು, ವೈದ್ಯರು, ಶುಶ್ರೂಷಕಿಯರು ಹಾಗೂ ಸಿಬ್ಬಂದಿ ವರ್ಗ
✦ ದಾವಣಗೆರೆ ಜಿಲ್ಲಾ ಮಕ್ಕಳ ವೈದ್ಯರ ಸಂಘ
✦ ಮಕ್ಕಳ ಶಾಸ್ತ್ರವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜ್ ಹಾಗೂ ಎಸ್‌ಎಸ್‌ಐಎಂಎಸ್, ದಾವಣಗೆರೆ.
✦ ಸದಸ್ಯರು ಹಾಗೂ ದಾನಿಗಳು ಡಾ|| ನಿರ್ಮಲಾ ಕೇಸರಿ ಟ್ರಸ್ಟ್



4ನೇ ವರ್ಷದ ಪುಣ್ಯಸ್ಮರಣೆ





ಲಿಂ|| ಶ್ರೀಮತಿ ಗಂಗಮ್ಮನವರು

ಶಾಮನೂರು ತಿಪ್ಪೇಗುಂಡಿ ಕರಿಯಪ್ಪನವರ ಧರ್ಮಪತ್ನಿ

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ. ನೀವು ಕೊಟ್ಟ ಆದರ್ಶ ಹಾಗೂ ನಿಮ್ಮ ಸನ್ಮಾರ್ಗದಲ್ಲಿ ನಡೆಯುತ್ತಾ, ಸದಾ ನಿಮ್ಮ ಚಿರಸ್ಮರಣೆಯಲ್ಲಿರುವ...

ಪುತ್ರರು : ಶಾಮನೂರು ಟಿ. ಬಸವರಾಜ್, ಶ್ರೀಮತಿ ಅನಿತಾ ಮತ್ತು ಮಕ್ಕಳು.
ಎಸ್.ಟಿ. ನಾಗರಾಜ್, ಶ್ರೀಮತಿ ಪವಿತ್ರ ಮತ್ತು ಮಕ್ಕಳು.
ಪುತ್ರಿಯರು : ದಿ. ಶ್ರೀಮತಿ ರುದ್ರಮ್ಮ ಗೌಡ್ರ ರಾಜಶೇಖರಪ್ಪ ಮತ್ತು ಮಕ್ಕಳು, ಆಲೂರು.
ಶ್ರೀಮತಿ ಟಿ. ಮಂಗಳ, ಎಂ.ಸಿ. ರುದ್ರಪ್ಪ, ನಿವೃತ್ತ ಶಿಕ್ಷಕರು ಮತ್ತು ಮಕ್ಕಳು, ಆಲೂರು.
ಶ್ರೀಮತಿ ಟಿ.ವನಜಾಕ್ಷಿ, ಸುಭಾಷ್ ಮತ್ತು ಮಕ್ಕಳು, ಕರೂರು.
ಶ್ರೀಮತಿ ಟಿ. ಕವಿತಾ, ಡಿ.ಎಲ್. ರವಿಕುಮಾರ್ ಮತ್ತು ಮಕ್ಕಳು, ಅಸಗೋಡು.
ತಿಪ್ಪೇಗುಂಡಿ ವಂಶಸ್ಥರು, ಶಾಮನೂರು.
ಗೌಡ್ರ ವಂಶಸ್ಥರು, ಆಲೂರು. ಪಟೇಲ್ ವಂಶಸ್ಥರು, ಮೆದಿಕೆರೆ.

# ಸಂಕ್ರಾಂತಿ ದಿನ ಸರಳ ಹರ ಜಾತ್ರೆ ಆಚರಣೆ



ದಾವಣಗೆರೆ, ಜ. 7- ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆವರಣದಲ್ಲಿ ಮಕರ ಸಂಕ್ರಾಂತಿ ಹಬ್ಬದ ದಿನ ಶ್ರೀ ವಚನಾನಂದ ಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ಇದೇ ದಿನಾಂಕ 14 ರಂದು ಸರಳವಾಗಿ ಹರ ಜಾತ್ರೆ ಆಚರಿಸಲು ಸಮಾಜದವರು ತೀರ್ಮಾನಿಸಿದ್ದಾರೆ.

ಹರಿಹರದ ಪಂಚಮಸಾಲಿ ಪೀಠದಲ್ಲಿ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ವತಿಯಿಂದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸೋಮವಾರ ಸಂಜೆ ನಡೆದ ಹರಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಸಮಾಜದ ಮುಖಂಡರು, ಧರ್ಮದರ್ಶಿಗಳು, ಭಕ್ತರು ಈ ಬಾರಿ ಸಾಂಪ್ರಾದಾಯಿಕವಾಗಿ ಒಂದು ದಿನ ಹರಜಾತ್ರೆ ನಡೆಸಲು ನಿರ್ಧರಿಸಿದ್ದಾರೆ ಎಂದು ಪೀಠದ ಆಡಳಿತಾಧಿಕಾರಿ ಡಾ.ಎಚ್.ಪಿ. ರಾಜ್‌ಕುಮಾರ್ ಮಂಗಳವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹರ ಪೀಠದಲ್ಲಿ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುವುದು ಹಾಗೂ ಆರ್ಥಿಕ ಮುಗ್ಗಟ್ಟು ಕಾರಣದಿಂದ ಈ ಬಾರಿ ಸರಳವಾಗಿ ಹರ ಜಾತ್ರೆ ಆಚರಿಸಬೇಕೆಂದು ಸಮಾಜ ಮುಖಂಡರು, ಭಕ್ತರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಅದರಂತೆ ಈ ಬಾರಿ ಸಾಂಪ್ರಾದಾಯಿಕವಾಗಿ ಹರಜಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

**ದ್ವಿಶತಮಾನ ವಿಜಯೋತ್ಸವ ವಿಶೇಷ :** ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ವಿಜಯೋತ್ಸವದ ದ್ವಿಶತಮಾನೋತ್ಸವ ಆಚರಣೆ ಈ ಬಾರಿಯ 2025 ರ ಹರ ಜಾತ್ರೆಯ ಜಾತ್ರೆ ವಿಶೇಷವಾಗಿದೆ ಹಾಗೂ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರ ಸಪ್ತಮ (ಏಳನೇ) ವಾರ್ಷಿಕ ಪೀಠಾರೋಹಣ ನಡೆಯಲಿದೆ. ಜಾತ್ರಾ ಮಹೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಡಿನ ಮಠಾಧೀಶರು, ಸಚಿವರು, ಶಾಸಕರು, ಗಣ್ಯರನ್ನು ಆಹ್ವಾನಿಸಲು ಪೂರ್ವಭಾವಿ ಸಭೆ ತೀರ್ಮಾನಿಸಿದೆ ಎಂದು ತಿಳಿಸಿದ್ದಾರೆ.

ಸಭೆಯಲ್ಲಿ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್, ಧರ್ಮದರ್ಶಿ ಬಿ.ಸಿ. ಉಮಾಪತಿ, ಚಂದ್ರಶೇಖರ್ ಪೂಜಾರ್, ದಾಸೋಹ ಸಮಿತಿ ರಾಜ್ಯಾಧ್ಯಕ್ಷ ಪ್ರಕಾಶ್ ಪಾಟೀಲ್,ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ವಸಂತಾ ಹುಲ್ಲತ್ತಿ, ಶೇಖರಗೌಡ ಮುತ್ತಣ್ಣನವರ, ಪೀಠದ ಧರ್ಮದರ್ಶಿಗಳು, ಸಮಾಜದ ಮುಖಂಡರು, ಭಕ್ತರು ಇದ್ದರು.

## ಸೋಮಣ್ಣ ಹರಜಾತ್ರಾ ಸಮಿತಿ ಅಧ್ಯಕ್ಷ

ಸಭೆಯಲ್ಲಿ ಕರ್ನಾಟಕ ಗಡಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನ ಮರದ ಅವರನ್ನು 2025 ರ ಹರಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ದಕ್ಷಿಣದಿಂದ ಉತ್ತರಾಯಣ ಪುಣ್ಯ ಕಾಲಕ್ಕೆ ಸೂರ್ಯ ಪಥ ಬದಲಿಸುವ ಮಕರ ಸಂಕ್ರಾಂತಿ ಹಬ್ಬದ ದಿನ ನಡೆಯುವ ಹರಜಾತ್ರೆಗೆ ಸಮಾಜ, ಹಾಗೂ ಎಲ್ಲ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಆಡಳಿತಾಧಿಕಾರಿ ಡಾ.ರಾಜಕುಮಾರ್ ಮನವಿ ಮಾಡಿದ್ದಾರೆ.

### ಔತಣಕೂಟದ ರಾಜಕೀಯಕ್ಕೆ ಡಿಕೆಶಿ ಪ್ರತಿತಂತ್ರ..!

# ಸಿಎಂ, ಬೆಂಬಲಿಗ ಸಚಿವರ ದೆಹಲಿ ಪ್ರವಾಸ ಹಠಾತ್ ರದ್ದು

ಬೆಂಗಳೂರು, ಜ.7 - ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗ ಸಚಿವರು ದೆಹಲಿ ಪ್ರವಾಸವವನ್ನು ಹಠಾತ್ತಾಗಿ ರದ್ದುಗೊಳಿಸಿ ದ್ದಾರೆ.

ಸಿದ್ದರಾಮಯ್ಯ ಅವರನ್ನು ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕೆಂದು ಒತ್ತಾಯಿಸಲು ವರಿಷ್ಠರ ಭೇಟಿಗೆ ಲೋಕೋಪ ಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಣ ಮುಂದಾಗಿತ್ತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರೋಧಿ ಬಣದ ಶಾಸಕರು ಮತ್ತು ಸಚಿವರು ಜಾರಕಿಹೊಳಿ ನೇತೃತ್ವದಲ್ಲಿ ವರಿಷ್ಠರನ್ನು ಭೇಟಿ ಮಾಡಲು ಸಮಯವನ್ನೂ ನಿಗದಿ ಮಾಡಿಕೊಂಡಿದ್ದರು.

ತಮ್ಮ ವಿರುದ್ಧ ಔತಣಕೂಟ ರಾಜಕೀಯ ಜೋರಾಗುತ್ತಿದ್ದಂತೆ ವಿದೇಶ ಪ್ರವಾಸದಲ್ಲಿದ್ದ ಶಿವಕುಮಾರ್ ನಿನ್ನೆ ದಿಢೀರನೆ ದೆಹಲಿಗೆ ಹಿಂತಿರುಗಿ, ವರಿಷ್ಠರನ್ನು ಭೇಟಿ ಮಾಡಿದ್ದಲ್ಲದೆ, ದೆಹಲಿ ವಿಧಾನಸಭಾ ಚುನಾವಣಾ ಕಣಕ್ಕೂ ಪ್ರವೇಶ ಮಾಡಿಬಿಟ್ಟಿದ್ದರು.

ಶಿವಕುಮಾರ್ ವರಿಷ್ಠರನ್ನು ಭೇಟಿ ಆಗುತ್ತಿದ್ದಂತೆ ಮುಖ್ಯಮಂತ್ರಿ ಹಾಗೂ ಸಚಿವರ ತಂಡದ ದೆಹಲಿ ಪ್ರವಾಸಕ್ಕೆ ಬ್ರೇಕ್ ಬಿದ್ದಿತು.

ದೆಹಲಿಯಲ್ಲೇ ಬಿಡಾರ ಹೂಡಿರುವ ಶಿವಕುಮಾರ್, ಸತೀಶ್ ಜಾರಕಿಹೊಳಿಯ ಬೆಳಗಾವಿ ರಾಜಕೀಯಕ್ಕೆ ಪ್ರತಿಯಾಗಿ, ಮುಖ್ಯಮಂತ್ರಿ ಗಾದಿ ಪಡೆಯುವ ತಮ್ಮ ತಂತ್ರಗಾರಿಕೆ ನಡೆಸಿದ್ದಾರೆ.

ವರಿಷ್ಠರ ಭೇಟಿ ಜೊತೆಗೆ ಕೇಂದ್ರದ ಇಬ್ಬರು ಸಚಿವರನ್ನು ಶಿವಕುಮಾರ್ ಇಂದು ದೆಹಲಿಯಲ್ಲಿ ಗೌಪ್ಯವಾಗಿ ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಹೆಚ್ಚಿನ ಚರ್ಚೆಗೆ ಗ್ರಾಸವಾಗಿದೆ ಯಾದರೂ ಭೇಟಿಯ ನಿಜ ಕಾರಣ ತಿಳಿದುಬಂದಿಲ್ಲ.

ಮೊದಲೇ ನಿಗದಿಯಾದಂತೆ ಜಾರಕಿಹೊಳಿ ತಂಡ ಸೋಮವಾರ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಬೇಕಿತ್ತು.

ಇದರ ಬೆನ್ನಲ್ಲೇ ಮುಖ್ಯಮಂತ್ರಿ ಅವರೂ, ಇಂದು ಮಂಗಳವಾರ, ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಇಂದೇ ನಗರಕ್ಕೆ ಹಿಂತಿರುಗುವ ಕಾರ್ಯಕ್ರಮ ನಿಗದಿಯಾಗಿತ್ತು. ತಮ್ಮ ಭೇಟಿ ಸಂದರ್ಭದಲ್ಲಿ ವಿಧಾನ ಪರಿಷತ್‌ಗೆ ಮೂವರ ನಾಮಕರಣ ಹಾಗೂ ತೆರವಾಗಿರುವ ಒಂದು ಸ್ಥಾನ ಭರ್ತಿ ಮಾಡುವುದು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಅಲ್ಲದೇ, ಬಜೆಟ್ ಅಧಿವೇಶನದಲ್ಲಿ ವಿಧಾನ ಪರಿಷತ್‌ನ ಸಭಾಪತಿ ಹಾಗೂ ಉಪಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್‌ನವರನ್ನು ತರುವ ಸಂಬಂಧ ಚರ್ಚೆ ನಡೆಸುವ ಯೋಜನೆ ಇತ್ತು.

ದೆಹಲಿಗೆ ತೆರಳುವ ಮುನ್ನ ತಮ್ಮ ಆಪ್ತ ಸಚಿವರು ಮತ್ತು ಶಾಸಕರೊಂದಿಗೆ ಮುಖ್ಯಮಂತ್ರಿ ನಡೆಸಿದ ಔತಣಕೂಟದ ಕೆಲವು ರಾಜಕೀಯ ವಿಷಯಗಳು ಮಾಧ್ಯಮಗಳಲ್ಲಿ ಬಹಿರಂಗಗೊಳ್ಳುತ್ತಿದ್ದಂತೆ, ಶಿವಕುಮಾರ್ ದೆಹಲಿ ರಾಜಕೀಯ ರಂಗ ಪ್ರವೇಶ ಮಾಡಿದರು.

ಶಿವಕುಮಾರ್ ಪ್ರವೇಶ ಕೊಡುತ್ತಿದ್ದಂತೆ ವರಿಷ್ಠರು ಸಿದ್ದರಾಮಯ್ಯ ಮತ್ತು ಬೆಂಬಲಿಗ ಸಚಿವರ ದೆಹಲಿ ಭೇಟಿಗೆ ತಾತ್ಕಾಲಿಕ ತಡೆ ನೀಡಿದ್ದಲ್ಲದೆ, ದೆಹಲಿ ವಿಧಾನಸಭಾ ಚುನಾವಣೆ ನಂತರ ಬರುವಂತೆ ತಿಳಿಸಿದರು.

ವರಿಷ್ಠರು ಕಡೇ ಗಳಿಗೆಯಲ್ಲಿ ಸಚಿವರು ಮತ್ತು ಮುಖ್ಯಮಂತ್ರಿಗೆ ನೀಡಿದ್ದ ಸಮಯವನ್ನು ಮುಂದೂಡಿದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗರು ದೆಹಲಿ ಪ್ರವಾಸವನ್ನು ರದ್ದುಪಡಿಸಿದ್ದಾರೆ.

ದೆಹಲಿ ಪ್ರವಾಸ ರದ್ದಾಗುತ್ತಿದ್ದಂತೆ ಇಂದಿನ ಕಾರ್ಯಕ್ರಮಗಳಿಗೆ ಮೊದಲೇ ಸಮಯ ಕೇಳಿದ್ದವರಿಗೆ ಮುಖ್ಯಮಂತ್ರಿ ಅವಕಾಶ ಮಾಡಿ ಕೊಟ್ಟರು.

## ಜಿ.ಪರಮೇಶ್ವರ್ ಆಯೋಜಿಸಿದ್ದ 'ಡಿನ್ನರ್ ಪಾರ್ಟಿ' ದಿಢೀರ್ ರದ್ದು

ಬೆಂಗಳೂರು, ಜ.7- ಗೃಹ ಸಚಿವ ಜಿ.ಪರಮೇಶ್ವರ್ ಅವರು ಬುಧವಾರ ರಾತ್ರಿ ದಲಿತ ಸಚಿವರು ಹಾಗೂ ಶಾಸಕರಿಗೆ ಹಮ್ಮಿಕೊಂಡಿದ್ದ ಡಿನ್ನರ್ ಪಾರ್ಟಿ ಹೈಕಮಾಂಡ್ ನಿರ್ದೇಶನದಂತೆ ರದ್ದಾಗಿದೆ.

ಈಗಾಗಲೇ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ರಾತ್ರಿ ಭೋಜನಾಕೂಟ ಆಯೋಜಿಸಿದ್ದರು. ಅದರಲ್ಲಿ ಸಿದ್ದರಾಮಯ್ಯ ಮತ್ತು ಅವರ ಆಪ್ತರಷ್ಟೇ ಭಾಗವಹಿಸಿದ್ದು ವಿವಾದಕ್ಕೀಡಾಗಿದೆ. ಇದು ಕಾಂಗ್ರೆಸ್ಸಿನಲ್ಲಿ ಇದೆಯೆಂದು ಹೇಳಲಾದ ಬಣ ರಾಜಕೀಯದ ಊಹಾಪೋಹಗಳಿಗೆ ಪುಷ್ಠಿ ನೀಡಿದೆ. ಎಂಬ ಕಾರಣದಿಂದ ಹೈಕಮಾಂಡ್ ಮಧ್ಯಪ್ರವೇಶ ಮಾಡಿದೆ.

ಚಿತ್ರದುರ್ಗದಲ್ಲಿ ಈ ಹಿಂದೆ ನಡೆದಿದ್ದ ದಲಿತ ಸಮಾವೇಶ ಮಾದರಿಯಲ್ಲಿ ಮತ್ತೊಂದು ದಲಿತ ಸಮಾವೇಶವನ್ನು ಹಮ್ಮಿಕೊಳ್ಳಲು ಪರಮೇಶ್ವರ್ ಸಿದ್ಧತೆ ಮಾಡಿಕೊಂಡಿದ್ದರು. ಇದರ ಅಂಗವಾಗಿ ದಲಿತ ಸಚಿವರು ಹಾಗೂ ಶಾಸಕರಿಗೆ ಔತಣಕೂಟವನ್ನು ಆಯೋಜನೆ ಮಾಡಿದ್ದರು.

## ಹರಿಹರ : ಇಂದು ಸಂದಲ್, ಉರುಸ್




ಹರಿಹರ, ಜ.7- ಹಜರತ್ ಆಹ್ಮದ್ ಷಾ ಮತ್ತು ಮೊಹಮದ್ ಷಾ ವಲಿ ರವರ ಗಂಧ ಕಾರ್ಯಕ್ರಮದ ಅಂಗವಾಗಿ ಸಂದಲ್ ಮತ್ತು ಉರುಸ್ ಕಾರ್ಯಕ್ರಮವನ್ನು ನಾಳೆ ದಿನಾಂಕ 8 ರಿಂದ 10 ರವರೆಗೆ ಆಚರಿಸಲಾಗುತ್ತದೆ ಎಂದು ಹೆಚ್.ಎ.ಎಂ.ನೌಜವಾನ್ ಕಮಿಟಿ ಅಧ್ಯಕ್ಷ ನಸ್ರುಲ್ಲಾ ಮಕಂದಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗಂಧ ಕಾರ್ಯಕ್ರಮವು ನಾಳೆ ದಿನಾಂಕ 8ರಂದು ಮಧ್ಯಾಹ್ನ 4 ಗಂಟೆಯಿಂದ ಪ್ರಾರಂಭವಾಗಲಿದ್ದು, ಮೆರವಣಿಗೆ ಬಾಹರ್ ಮಕಾನ್ ದರ್ಗಾದಿಂದ ಆರಂಭಗೊಂಡು ಆಂಜನೇಯ ಸ್ವಾಮಿ ದೇವಸ್ಥಾನ ರಸ್ತೆ, ಹಳೇ ಪಿ.ಬಿ. ರಸ್ತೆ, ರಾಣಿ ಚೆನ್ನಮ್ಮ ರಸ್ತೆಯ ಮೂಲಕ ಹಾದು ದರ್ಗಾಕ್ಕೆ ತಂದು ಸಮರ್ಪಿಸಲಾಗುತ್ತದೆ. 9 ರಂದು ರಾತ್ರಿ 9 ಗಂಟೆಗೆ ದಾವಣಗೆರೆ ಮೌಲಾನಾ ಮುಫ್ತಿ ರಿಜ್ವಾನ್ ನೂರಿ ಅವರಿಂದ ಪ್ರವಚನ (ತಕರೀರ್) ಕಾರ್ಯಕ್ರಮ ನಡೆಯಲಿದೆ. 10 ರಂದು ಬಾಹರ್ ಮಕಾನ್ ದರ್ಗಾ ಮುಂಭಾಗದಲ್ಲಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ಈ ಬಾರಿ ಯಾವುದೇ ರೀತಿಯ ಡಿ.ಜೆ. ಸೌಂಡ್ ಸಿಸ್ಟಮ್ ಬಳಸದೆ ಮೆರವಣಿಗೆ ಮಾಡಲಾಗುತ್ತದೆ ಎಂದು ಅವರು ಹೇಳಿದರು. ಗೋಷ್ಠಿಯಲ್ಲಿ ಬಾಬುಜಾನ್, ಅಫ್ತಾಭ್, ಅಜಗರ್ ಅಲಿ, ಶಂಶಾಖಾನ್ ಇತರರು ಹಾಜರಿದ್ದರು.


## ಆರ್.ಸಮೀವುಲ್ಲಾಖಾನ್ (ಅಸ್ರಾ ಟಿ.ವಿ. ಮುನ್ನಾ) ನಿಧನ



ದಾವಣಗೆರೆ ಸಿಟಿ 1ನೇ ಮೇನ್, 9ನೇ ಕ್ರಾಸ್, ವಿನೋಬನಗರ ವಾಸಿ ದಿ. ಬಿ. ರೆಹಮಾನ್ ಇವರ ಮಗ ಅಸ್ರಾ ಟಿ.ವಿ. ಏಜೆನ್ಸಿಸ್ ಮಾಲೀಕಾರದ **ಆರ್. ಸಮೀವುಲ್ಲಾಖಾನ್** (55) ಇವರು ದಿನಾಂಕ 7.1.2025ರ ಮಂಗಳವಾರ ರಾತ್ರಿ 11.30ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.1.2025ರ ಬುಧವಾರ ಸಂಜೆ 5 ಗಂಟೆಯ ನಂತರ ಪಿ.ಬಿ.ರಸ್ತೆ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ,**
**ಮೊ. : 98454 56782, 99729 75118**

## ಸವಿನೆನಪು



**ಲಿಂ॥ ಶ್ರೀ ಕೊಂಡಜ್ಜಿ ಗೌಡ್ರ ಬಸಪ್ಪ**
ನಿವೃತ್ತ ಶಿಕ್ಷಕರು
ನಿಧನ : 08.01.2018

**ಲಿಂ॥ ಶ್ರೀಮತಿ ಬಿ. ಸುಶೀಲಮ್ಮ**
ನಿವೃತ್ತ ಶಿಕ್ಷಕರು
ನಿಧನ : 13.12.2010

ಒಡಲಿದೋ ಒಲವಿನ ಒರತೆ.... ಕಂಗಳೋ ಕರುಣೆಯ ಕಡಲು....
ಮಾತೃ ದೇವೋ ಭವ.... ಪಿತೃ ದೇವೋ ಭವ....
ನೀವು ನಮ್ಮನ್ನಗಲಿ ದೂರವಾಗಿದ್ದರೂ, ನೀವು ನಮಗೆ ಕಲಿಸಿದ ಜೀವನದ ಪಾಠ,
ಆದರ್ಶದ ನಡೆ-ನುಡಿ, ಸಹಬಾಳ್ವೆ, ಮಮತೆಯ ಜೀವನದ ಪಥದಲ್ಲಿ ಸಾಗುವುದಕ್ಕೆ
ನಿಮ್ಮ ನೆನಪೇ ನಮಗೆಲ್ಲಾ ಶ್ರೀ ರಕ್ಷೆ...... ನಿಮ್ಮ ಪ್ರೀತಿಯ...

ಪುತ್ರರು : **ಕೆ.ಜಿ. ಶಿವಕುಮಾರ್,** ಮಾಜಿ ಸದಸ್ಯರು, ಮಹಾನಗರಪಾಲಿಕೆ, ಮಾಜಿ ಅಧ್ಯಕ್ಷರು, ನಗರಸಭೆ.
**ಜಿ.ಬಿ. ಲಿಂಗರಾಜ್,** ಮಾಜಿ ಅಧ್ಯಕ್ಷರು, ಸ್ಥಾಯಿ ಸಮಿತಿ, ಮಹಾನಗರಪಾಲಿಕೆ.
**ಜಿ.ಬಿ. ಸುರೇಶ್‌ಕುಮಾರ್** Architectural and Structural Consultant, ಸುಶೀಲ್ ಅಸೋಸಿಯೇಟ್ಸ್
ಪುತ್ರಿಯರು-ಅಳಿಯಂದಿರು :
**ಶ್ರೀಮತಿ ಕೆ.ಜಿ. ಸುವರ್ಣಮ್ಮ ಶ್ರೀ ಬಿ. ವಾಮದೇವಪ್ಪ, ಅಸಗೋಡು.**
**ಶ್ರೀಮತಿ ಜಿ.ಬಿ. ಪಾರ್ವತಮ್ಮ, ಶ್ರೀ ಎನ್.ಎಸ್. ಜಯಪ್ಪ, ತಾಳ್ಯ.**
**ಶ್ರೀಮತಿ ಜಿ.ಬಿ. ಮಂಜುಳಾ, ಶ್ರೀ ಕೆ.ಎಸ್. ಉಮೇಶಪ್ಪ, ಶೆಟ್ಟಿಹಳ್ಳಿ.**
ಸೊಸೆಯಂದಿರು : **ಶ್ರೀಮತಿ ಜಿ.ಪಿ. ಚಂದ್ರಿಕಾ,**
**ಶ್ರೀಮತಿ ವಿಜಯ ಲಿಂಗರಾಜು,** ಮಾಜಿ ಸದಸ್ಯರು, ನಗರಸಭೆ, ದಾವಣಗೆರೆ,
**ಶ್ರೀಮತಿ ಎಂ.ಬಿ. ತಾರಾ,** ಸಿವಿಲ್ ಇಂಜಿನಿಯರ್ ಮತ್ತು **ಮೊಮ್ಮಕ್ಕಳು, ಮರಿಮೊಮ್ಮಕ್ಕಳು**
**ಬೆಳ್ಳೂಡಿ ಹಾಗೂ ಕೊಂಡಜ್ಜಿ ಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.**

# ನಂದಿತಾವರೆ ಪಿಎಸಿಎಸ್ ಚುನಾವಣೆ : 11 ಜನ ಆಯ್ಕೆ

ಮಲೇಬೆನ್ನೂರು, ಜ.7- ನಂದಿತಾವರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ಸೋಮವಾರ ನಡೆದ ಚುನಾವಣೆಯಲ್ಲಿ 11 ಜನ ಆಯ್ಕೆಯಾಗಿದ್ದಾರೆ.

ಸಾಲಗಾರರ ಕ್ಷೇತ್ರದಿಂದ ಸಾಮಾನ್ಯ ವರ್ಗದ ನಂದಿತಾವರೆಯ ಪಿ.ಗದಿಗೆಪ್ಪ, ಎನ್.ಪಿ.ಶಿವನಗೌಡ, ಎನ್.ಎಂ.ರಾಜು, ಎಂ.ವೆಂಕಟೇಶ್, ಎಕ್ಕೆಗೊಂದಿಯ ಬಿ.ಜಿ.ತಿಮ್ಮನಗೌಡ, ಎಸ್ಸಿ ವರ್ಗದ ನಂದಿತಾವರೆಯ ಎ. ಕೆ.ನಾಗಪ್ಪ, ಬಿಸಿಎಂ 'ಎ' ವರ್ಗದ ಎಕ್ಕೆಗೊಂದಿ ಜಿ.ಎಸ್.ಮಹಾಂತೇಶ್, ಬಿಸಿಎಂ 'ಬಿ' ವರ್ಗದ ನಂದಿತಾವರೆಯ ಎನ್.ಎಂ.ಶಂಭಯ್ಯ, ಮಹಿಳಾ ಮೀಸಲು ವರ್ಗದಿಂದ ಎಕ್ಕೆಗೊಂದಿ ನಾಗರತ್ನಮ್ಮ, ನಂದಿತಾವರೆ ಕೆ.ಜಿ. ಕಮಲಮ್ಮ ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ನಂದಿತಾವರೆಯ ಕೆ.ಎನ್. ಹನುಮಗೌಡ ಅವರುಗಳು ಚುನಾಯಿತರಾಗಿದ್ದಾರೆ.

ಎಸ್ಟಿ ಮೀಸಲು ಸ್ಥಾನಕ್ಕೆ ಯಾರೂ ಅರ್ಜಿ ಸಲ್ಲಿಸದ ಕಾರಣ ಆ ಸ್ಥಾನ ಖಾಲಿ ಉಳಿದಿದೆ.

# ತೀವ್ರತೆ ಭೂಕಂಪ, 95 ಸಾವು

**(1ನೇ ಪುಟದಿಂದ)** ಭೂಕಂಪ ಸಂಭವಿಸಿದೆ. ಆದರೆ ಅಮೆರಿಕಾದ ಭೂವಿಜ್ಞಾನ ಸಂಸ್ಥೆಯು ಭೂಕಂಪದ ತೀವ್ರತೆಯನ್ನು 7.1 ಎಂದು ತಿಳಿಸಿದೆ.

ಭಾರತದ ಗಡಿ ಸಮೀಪದಲ್ಲಿರುವ ಶಿಗಾತ್ಸೆ ಭೂಕಂಪದಿಂದ ತತ್ತರಿಸಿದೆ. ಶಿಗಾತ್ಸೆ ನಗರವು ಟಿಬೆಟ್‌ನ ಅತ್ಯಂತ ಪವಿತ್ರ ನಗರಗಳಲ್ಲಿ ಒಂದು ಎಂದು ಭಾವಿಸಲಾಗಿದೆ. ಈ ನಗರವು ಪಂಚನ್ ಲಾಮಾ ಅವರ ತಾಣವೂ ಆಗಿದೆ.

## ಕಾನೂನು ಪದವೀಧರರಿಗೆ ತರಬೇತಿ

ದಾವಣಗೆರೆ, ಜ. 7 - ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಭತ್ಯೆ ನೀಡಲು ಅರ್ಹ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ - 577006 ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು ಇದೇ ದಿನಾಂಕ 18 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

### ಜಗಳೂರು ಟೌನ್ ಸಿ. ಶಕುಂತಲಮ್ಮ ನಿಧನ



ಜಗಳೂರು ಟೌನ್ ನಿವೃತ್ತ ಪಿಡಬ್ಲೂಡಿ ನೌಕರರಾದ ಡಿ. ನಾಗಪ್ಪನವರ ಧರ್ಮಪತ್ನಿ ಸಿ. ಶಕುಂತಲಾ ಅವರು ದಿನಾಂಕ 7.1.2025ರ ಮಂಗಳವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.1.2025ರ ಬುಧವಾರ ಮಧ್ಯಾಹ್ನ 12 ಕ್ಕೆ ಜಗಳೂರು ಟೌನ್ ಗಿಡ್ಡನಕಟ್ಟೆ ರಸ್ತೆಯಲ್ಲಿರುವ ಅವರ ಜಮೀನಿನಲ್ಲಿ ನೆರವೇರಲಿದೆ.

## ರಾಜ್ಯಗಳಿಗೆ ಕೇಂದ್ರ ಸರ್ಕಾರದ ಸೂಚನೆ

**(1ನೇ ಪುಟದಿಂದ)** ತೆರೆದು ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಿಸುವಂತೆ ಸೂಚಿಸಿದೆ. ನಗರದ ಹೆಬ್ಬಾಳದ ಖಾಸಗಿ ಆಸ್ಪತ್ರೆಯಲ್ಲಿ ನಿನ್ನೆ ಎರಡು ಪ್ರಕರಣಗಳು ಪತ್ತೆಯಾದ ನಂತರ ಉಳಿದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಸಿರಾಟ ತೊಂದರೆಯಿಂದ ಬಳಲುತ್ತಿರು ವವರ ಮಾಹಿತಿಯನ್ನು ಪಡೆದುಕೊಂಡಿದೆ. ಕೆಲವು ಸಂಶಯಾಸ್ಪದ ಪ್ರಕರ ಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಚಿಕಿ ತ್ಸೆಗೆ ಒಳಪಡಿಸಲಾಗಿದೆ ಎಂದು ಇಲಾಖೆ ಉನ್ನತ ಮೂಲಗಳು ತಿಳಿಸಿವೆ.

## ಪುಣ್ಯ ಸ್ಮರಣೆ




8.1.2018 (7ನೇ ವರ್ಷದ ಪುಣ್ಯಸ್ಮರಣೆ)
**ದಿ॥ ಶ್ರೀಮತಿ ಬಿ. ಅಮೃತಮ್ಮ**
26.1.2005 (20ನೇ ವರ್ಷದ ಪುಣ್ಯಸ್ಮರಣೆ)
**ದಿ॥ ಶ್ರೀಮತಿ ಹೇಮಕ್ಕ ತುಂಬಿಗಿ**

ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೆನಪಿನಲ್ಲಿರುವ...

ಮಕ್ಕಳು : **ಕೆ.ಎನ್. ಚೇತನ ಶಿವರಾಜ್**
**ಪಿ. ಧನ್ಯಕುಮಾರಿ, ಪಿ. ಅರ್ಚನ,**
**ಪರಮೇಶ್ವರಪ್ಪ ತುಂಬಿಗಿ,** ಮಹಾನಗರ ಪಾಲಿಕೆ, ದಾವಣಗೆರೆ.

# ಕರಾಟೆ : ಡ್ರಾಗನ್ ವಾರಿಯರ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ಮಕ್ಕಳಿಗೆ ಪ್ರಶಸ್ತಿ



ದಾವಣಗೆರೆ, ಜ. 7 - ಶಿವಮೊಗ್ಗ ಡಿಸ್ಟಿಕ್ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಆಯೋಜಿಸಿದ್ದ 2 ನೇ ರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್ ಸ್ಪರ್ಧೆಗಳಲ್ಲಿ ನಗರದ ಡ್ರಾಗನ್ ವಾರಿಯರ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ತಂಡದ ಮಕ್ಕಳು ಭಾಗವಹಿಸಿ ಪ್ರಶಸ್ತಿ ಪಡೆದಿರುತ್ತಾರೆ. ಇವರಿಗೆ ಸಂಸ್ಥೆಯ ಕಾರ್ಯದರ್ಶಿ ಸಾದಿಕ್ ಬಾಷಾ ತರಬೇತಿ ನೀಡಿದ್ದಾರೆ.

ಯುಕ್ತ ಎಂ. ಮಾಗನೂರ್ ಕಟೆ ಮೊದಲ ಸ್ಥಾನ ಹಾಗೂ ಕುಮುಟೆ ಮೊದಲ ಸ್ಥಾನ ಗಳಿಸಿದ್ದಾರೆ. ಇದೇ ರೀತಿ ಆಯಾ ವಯೋಮಿತಿ ವಿಭಾಗದಲ್ಲಿ, ನಿಹಾರಿಕಾ ಎಂ. ಮಾಗನೂರ್ ಮೊದಲ ಸ್ಥಾನ, ಖುಷಿ ಎರಡನೆಯ ಸ್ಥಾನ, ಅದ್ವಿತ್ ಕಾಮತ್ ಎರಡನೆ ಎರಡನೆ ಸ್ಥಾನ, ಸಂವಿದ್ ಮೂರನೇ ಸ್ಥಾನ, ವಿಸ್ಮಯ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

ಬಹುಮಾನ ಪಡೆದ ಪಟುಗಳಿಗೆ ವಿದ್ಯಾನಗರ ವಾಯು ವಿಹಾರ ಬಳಗವು ಇಂದು ಬೆಳಿಗ್ಗೆ ಹಿರಿಯ ಪತ್ರಕರ್ತ ಹಾಗೂ ಲೇಖಕ ಬಾ.ಮ. ಬಸವರಾಜಯ್ಯ ಅವರ ಸಮ್ಮುಖದಲ್ಲಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ ಮತ್ತು ಪೋಷಕರು ಉಪಸ್ಥಿತರಿದ್ದರು.

## ಪ್ರಾದೇಶಿಕ ಸಾರಿಗೆ ಶಿಬಿರ

ದಾವಣಗೆರೆ, ಜ.7 - 2025ನೇ ವರ್ಷದಲ್ಲಿ ದಾವಣಗೆರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ವತಿಯಿಂದ ಶಿಬಿರಗಳನ್ನು ಆಯೋಜಿಸಲಾಗಿದೆ.

ಪ್ರತಿ ತಿಂಗಳು 5 ನೇ ತಾರೀಖಿನಂದು ಮಲೇಬೆನ್ನೂರಿನ ನೀರಾವರಿ ಇಲಾಖೆಯ ಸಬ್ ಡಿವಿಜನ್ ಕಚೇರಿ ಆವರಣ ಮತ್ತು ಹರಿಹರದ ಎ.ಪಿ.ಎಂ.ಸಿ ಆವರಣ. ಪ್ರತಿ ತಿಂಗಳು 10ನೇ ತಾರೀಖಿನಂದು ಚನ್ನಗಿರಿ ಎ.ಪಿ. ಎಂ.ಸಿ ಆವರಣ, ಪ್ರತಿ ತಿಂಗಳು 20ನೇ ತಾರೀಖಿನಂದು ಜಗಳೂರು ಎ.ಪಿ.ಎಂ.ಸಿ ಆವರಣ. ಪ್ರತಿ ತಿಂಗಳು 23ನೇ ತಾರೀಖಿನಂದು ನ್ಯಾಮತಿ ಮತ್ತು ಹೊನ್ನಾಳಿ ಎ.ಪಿ.ಎಂ.ಸಿ ಆವರಣದಲ್ಲಿ ಸಾರಿಗೆ ಶಿಬಿರಗಳನ್ನು ನಡೆಸಲಾಗುವುದು ಎಂದು ಸಾರಿಗೆ ಅಧಿಕಾರಿ ಸಿ.ಎಸ್. ಪ್ರಮುತೇಶ್ ತಿಳಿಸಿದ್ದಾರೆ.

# ಶೇ.60ಕ್ಕೇರಿದ ಕಮಿಷನ್; ಕಾಂಗ್ರೆಸ್ ಸರ್ಕಾರ ದಿವಾಳಿಯತ್ತ

ಬೆಂಗಳೂರು, ಜ.7- ಹಿಮಾಚಲ ಪ್ರದೇಶ, ಕೇರಳ ಸರ್ಕಾರಗಳಂತೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವೂ ದಿವಾಳಿಯತ್ತ ಸಾಗುತ್ತಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಟೀಕಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ 60 ಪರ್ಸೆಂಟ್ ಕಮಿಷನ್ ಸರ್ಕಾರ ಎಂದಿದ್ದಾರೆ, ಮೊದಲು 40 ಪರ್ಸೆಂಟ್ ಇದ್ದ ಕಮಿಷನ್ ಈಗ 60 ಪರ್ಸೆಂಟ್ ಆಗಿದೆ, ಮುಂದೆ 65 ಪರ್ಸೆಂಟ್ ಪಡೆಯಲು ಮಂತ್ರಿಮಂಡಲದಲ್ಲಿ ಚರ್ಚೆ ಆಗುತ್ತಿದೆ ಎಂದರು.

40 x 60 ನಿವೇಶನದಲ್ಲಿ ಮನೆ ಕಟ್ಟಲು 20 ಲಕ್ಷ ರೂ. ಲಂಚ ಕೊಡಬೇಕು, ಕಳೆದ 6 ತಿಂಗಳಿನಿಂದ ಕಾಂಗ್ರೆಸ್ ಸರ್ಕಾರದಲ್ಲಿ 60 ಪರ್ಸೆಂಟ್ ಕಮಿಷನ್ ಇದೆ, ಹಿಂದೆ ಬಿಜೆಪಿ ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಎಂಬುದಾಗಿ ಆರೋಪಿಸಿದ್ದ ಗುತ್ತಿಗೆದಾರರಿಂದ ಈಗ 40 ಪರ್ಸೆಂಟ್‌ಗಿಂತ ಹೆಚ್ಚು ಕಮಿಷನ್ ಕೀಳುತ್ತಿದ್ದಾರೆ.

ಕಮಿಷನ್‌ಗಾಗಿ ಕಾಂಗ್ರೆಸ್ ಸರ್ಕಾರ ಇಡೀ ರಾಜ್ಯವನ್ನು ಕತ್ತಲೆಗೆ ದೂಡುತ್ತಿದೆ, ಹಿಟ್ನಾಳ್ ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ ಎಂದಿದ್ದರು, ಓಟ್ ಹಾಕುವಾಗಲೂ ಅಡ್ಜಸ್ಟ್ ಮಾಡ್ಕೊಳ್ಳಿ ಅಂತ ಹೇಳಬೇಕಿತ್ತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ, 'ಪಾಪರ್ ಮಾಡಿಬಿಡ್ತೀರಿ ನೀವು' ಎಂದು ಕಾಂಗ್ರೆಸ್‌ನವರಿಗೆ ಹೇಳಿದ್ದಾರೆ, ಅಭಿವೃದ್ಧಿ ಕುಂಠಿತ ಆಗಿದೆ ಎಂಬುದಾಗಿ ರಾಜು ಕಾಗೆ ಸೇರಿದಂತೆ ಕಾಂಗ್ರೆಸ್ ಶಾಸಕರೇ ದಿನನಿತ್ಯ ಕೂಗಾಡುತ್ತಿದ್ದಾರೆ, ಕಾಂಗ್ರೆಸ್‌ನವರು ಮಾತ್ರ ಅಭಿವೃದ್ಧಿ ಆಗುತ್ತಿದ್ದಾರೆ ಎಂದರು.

ಕಮಿಷನ್ ಪ್ರಮಾಣವನ್ನು ಮುಂದಿನ ದಿನಗಳಲ್ಲಿ ಶೇ.5 ರಷ್ಟು ಹೆಚ್ಚಿಸಲು ಕಾಂಗ್ರೆಸ್ ಮುಂದಾಗಿದೆ, ಗುತ್ತಿಗೆದಾರರು ಆತ್ಮಹತ್ಯೆಗೆ ಅರ್ಜಿ ಹಾಕಿಕೊಳ್ಳುವ ಕಾಲ ಬಂದಿದೆ.

ರಾಜ್ಯಪಾಲರಿಗೆ ದಯಾಮರಣ ಕೋರಿ ಪತ್ರ ಬರೆದಿದ್ದಾರೆ, ಕಮಿಷನ್ ಕೇಳಿರುವುದಕ್ಕೆ ದಾಖಲೆ ಇದೆಯಾ ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳುತ್ತಿದ್ದಾರೆ, ಈ ಹಿಂದೆ 40 ಪರ್ಸೆಂಟ್ ಆರೋಪ ಮಾಡಿದ್ದಾಗ ದಾಖಲೆ ಕೊಟ್ಟಿದ್ದಿರಾ, ಇದ್ಯಾವ ನ್ಯಾಯ, ಇದು 60 ಪರ್ಸೆಂಟ್ ಲೂಟಿ ಸರ್ಕಾರ ಎಂಬ ಕುಮಾರ ಸ್ವಾಮಿ ಹೇಳಿಕೆ ಸಮರ್ಥಿಸುತ್ತೇನೆ ಎಂದರು.

ಬಜೆಟ್‌ನಲ್ಲಿ ಸಿದ್ದರಾಮಯ್ಯ ಮೋಸ ಮಾಡಿದ್ದಾರೆ, ಬಿಜೆಪಿಗಿಂತ ಹೆಚ್ಚು ಅಭಿವೃದ್ಧಿ ಮಾಡಿದ್ದೇವೆ, ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಹೆಚ್ಚು ಅನುದಾನ ಕೊಟ್ಟಿರುವುದಾಗಿ ಹೇಳಿಕೊಂಡಿದ್ದಾರೆ, ಆದರೆ, ಗಂಗಾ ಕಲ್ಯಾಣ ಯೋಜನೆಗೆ ಬಿಜೆಪಿ 60 ಕೋಟಿ ರೂ. ಕೊಟ್ಟಿತ್ತು, ಈಗ ಮೀಸಲಿಟ್ಟಿರುವುದು ಕೇವಲ 40 ಕೋಟಿ ರೂ. ಮಾತ್ರ.

ಡಾ.ಬಿ.ಆರ್.ಅಂಬೇಡ್ಕರ್ ಸ್ವಯಂ ಉದ್ಯೋಗ ಯೋಜನೆಗೆ ಬಿಜೆಪಿ ಸರ್ಕಾರ 100 ಕೋಟಿ ರೂ. ಮೀಸಲಿಟ್ಟಿತ್ತು, ಕಾಂಗ್ರೆಸ್ 45 ಕೋಟಿ ರೂ.ಗೆ ಇಳಿಸಿದೆ, ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ಬಿಜೆಪಿ 100 ಕೋಟಿ ರೂ. ಕೊಟ್ಟರೆ, ಸಿದ್ದರಾಮಯ್ಯ 40 ಕೋಟಿ ರೂ. ನೀಡಿರುವುದು ದಲಿತರ ಮೇಲಿನ ಪ್ರೀತಿಯೇ, ಕಾಳಜಿಯೇ ಎಂದು ಪ್ರಶ್ನಿಸಿದರು.

ದೇವರಾಜು ಅರಸು ಅಭಿವೃದ್ಧಿ ನಿಗಮಕ್ಕೆ ಬಿಜೆಪಿ ಸರ್ಕಾರ 190 ಕೋಟಿ ರೂ. ಕೊಟ್ಟರೆ, ಕಾಂಗ್ರೆಸ್ ಸರ್ಕಾರ ಕೊಟ್ಟಿರುವುದು 100 ಕೋಟಿ ರೂ. ಮಾತ್ರ, ವಿಶ್ವಕರ್ಮ ಸಮುದಾಯಕ್ಕೆ ಕೇವಲ 13 ಕೋಟಿ ರೂ. ನೀಡಿದ್ದು, ಸಂಗೊಳ್ಳಿರಾಯಣ್ಣ ಕ್ಷೇತ್ರ ಅಭಿವೃದ್ಧಿಗೆ 50 ಕೋಟಿ ರೂ. ಕೊಟ್ಟಿದ್ದಾರೆ.

ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಬಿಜೆಪಿ 15 ಕೋಟಿ ರೂ.ನೀಡಿದರೆ, ಕಾಂಗ್ರೆಸ್ ಸರ್ಕಾರ 5 ಕೋಟಿ ರೂ. ನೀಡಿದೆ, ವೀರಶೈವ ನಿಗಮಕ್ಕೆ 100 ಕೋಟಿ ಕೊಟ್ಟಿದ್ದೆವು, ಇವರು 50 ಕೋಟಿ ರೂ. ಕೊಟ್ಟಿದ್ದಾರೆ, ದೇವಾಲಯ ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳಿಗೆ 274.68 ಕೋಟಿ ರೂ. ಕೊಟ್ಟಿದ್ದೆವು, ಕಾಂಗ್ರೆಸ್‌ನವರು 90 ಪರ್ಸೆಂಟ್ ಡಿಸ್ಕೌಂಟ್ ಮಾಡಿ, 17 ಕೋಟಿ ರೂ. ಕೊಟ್ಟಿದ್ದಾರೆ.

ಮಠ, ದೇವಾಲಯಗಳಿಗೆ, ಮುಖ್ಯಮಂತ್ರಿಗಳ ಸಹಾಯಧನಕ್ಕೆ ಬಿಜೆಪಿ ಅವಧಿಯಲ್ಲಿ 154.85 ಕೋಟಿ ರೂ. ನೀಡಿದ್ದರೆ, ಕಾಂಗ್ರೆಸ್ ಸರ್ಕಾರ 30 ಕೋಟಿ ರೂ. ಕೊಟ್ಟಿದೆ.

## ಸಾಕಮ್ಮ ಪೂರ್ವಾಚಾರ್ ನಿಧನ



ದಾವಣಗೆರೆ ಸಿಟಿ ನಿಟುವಳ್ಳಿ ಹೊಸ ಬಡಾವಣೆ ವಾಸಿ ಶ್ರೀ ಬಿ. ಪಿ. ಜಗನ್ನಾಥ (ನಿವೃತ್ತ ಉಪತಹಶೀಲ್ದಾರ್) ರವರ ತಾಯಿಯವರಾದ **ಶ್ರೀಮತಿ ಸಾಕಮ್ಮ ಪೂರ್ವಾಚಾರ್** (95) ಇವರು ದಿನಾಂಕ 7.1.2025ರ ಮಂಗಳವಾರ ಬೆಳಿಗ್ಗೆ 9.30ಕ್ಕೆ ನಿಧನರಾದರು.

ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.1.2025ರ ಬುಧವಾರ ಮಧ್ಯಾಹ್ನ 11.30ಕ್ಕೆ ಲೇಬರ್ ಕಾಲೋನಿಯ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 98445 65365, 78990 72356**

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ವಿನಯ್ ಎಂ.ಬಿ.**
**(ಸಿವಿಲ್ ಇಂಜಿನಿಯರ್)**
ಇವರು ದಿನಾಂಕ 01.01.2025ರಂದು ನಿಧನರಾಗಿದ್ದು ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಆಪ್ತ ಸ್ನೇಹಿತರ ಬಳಗ ಹಾಗೂ ತರಳಬಾಳು ಬಡಾವಣೆಯ ಚೌಡೇಶ್ವರಿ ದೇವಸ್ಥಾನ ಸಮಿತಿ ಸದಸ್ಯರು ಮತ್ತು ಭಕ್ತರು, ದಾವಣಗೆರೆ ಹಾಗೂ ಮೋರಿಗೆರೆ ಬಂಧು ಮಿತ್ರರು.**

# ಅಂತಿಮ ಮತದಾರರ ಪಟ್ಟಿ ಪ್ರಕಟ : ಜಿಲ್ಲೆಯಲ್ಲೀಗ ಮತದಾರರ ಸಂಖ್ಯೆ 14,96,819

ದಾವಣಗೆರೆ, ಜ.7- ಚುನಾವಣಾ ಆಯೋಗದ ನಿರ್ದೇಶನದನ್ವಯ ಕರಡು ಮತದಾರರ ಪಟ್ಟಿ ಪರಿಷ್ಕರಣೆ ಮಾಡಿ ಅಂತಿಮ ಮತದಾರರ ಪಟ್ಟಿಯನ್ನು ಮತಗಟ್ಟೆವಾರು ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಜಿ.ಎಂ.ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರ ಸೇರಿ 1693 ಮತಗಟ್ಟೆಗಳಿವೆ. ಈ ಎಲ್ಲಾ ಮತಗಟ್ಟೆಗಳಲ್ಲಿ 743888 ಪುರುಷ, 752813 ಮಹಿಳಾ ಹಾಗೂ 118 ಇತರೆ ಮತದಾರರು ಸೇರಿ 1496819 ಮತದಾರರಿದ್ದಾರೆ.

**ಕ್ಷೇತ್ರವಾರು ಮತಗಟ್ಟೆ ವಿವರ:** ಜಗಳೂರು 263, ಹರಿಹರ 228, ದಾವಣಗೆರೆ ಉತ್ತರ ಕ್ಷೇತ್ರ 245, ದಾವಣಗೆರೆ ದಕ್ಷಿಣ ಕ್ಷೇತ್ರ 217, ಮಾಯಕೊಂಡ ಕ್ಷೇತ್ರ 240, ಚನ್ನಗಿರಿ ಕ್ಷೇತ್ರ 255 ಹಾಗೂ ಹೊನ್ನಾಳಿ ಕ್ಷೇತ್ರದಲ್ಲಿ 245 ಮತಗಟ್ಟೆ ಸೇರಿ 1693 ಮತಗಟ್ಟೆಗಳಿವೆ.

**ಮತದಾರರ ವಿವರ :** ಜಗಳೂರು, ಪುರುಷ - 100634, ಮಹಿಳೆ - 99534, ಇತರೆ - 10, ಒಟ್ಟು - 200178, ಹರಿಹರ, ಪುರುಷ - , ಮಹಿಳೆ - 106767, ಇತರೆ-17, ಒಟ್ಟು - 212327, ದಾವಣಗೆರೆ ಉತ್ತರ ಪುರುಷ - 125964, ಮಹಿಳೆ-130652, ಇತರೆ - 36, ಒಟ್ಟು - 256652,ದಾವಣಗೆರೆ ದಕ್ಷಿಣ, ಪುರುಷ - 111266, ಮಹಿಳೆ-114395, ಇತರೆ-38, ಒಟ್ಟು-225699, ಮಾಯಕೊಂಡ, ಪುರುಷ-98063, ಮಹಿಳೆ - 97794, ಇತರೆ-4, ಒಟ್ಟು-195861, ಚನ್ನಗಿರಿ ಪುರುಷ-102105, ಮಹಿಳೆ-103051, ಇತರೆ-8, ಒಟ್ಟು-205164, ಹೊನ್ನಾಳಿ ಪುರುಷ-100307, ಮಹಿಳೆ-100626, ಇತರೆ-5, ಒಟ್ಟು-200938 ಮತದಾರರಿದ್ದಾರೆ.

ಅಂತಿಮ ಮತದಾರರ ಪಟ್ಟಿಯನ್ನು ತಾಲ್ಲೂಕು ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ಮಹಾನಗರ ಪಾಲಿಕೆಯಲ್ಲಿ ಪ್ರಕಟಿಸಲಾಗಿದೆ.

ಆನ್‌ಲೈನ್ https://voterportal.eci.gov.in or https://voters.eci.gov.in ನಲ್ಲಿ ಪರಿಶೀಲಿಸಿಕೊಳ್ಳಬಹುದು. ಮತ್ತು ಮತದಾರ ಪಟ್ಟಿಗೆ ಸೇರ್ಪಡೆ, ತಿದ್ದುಪಡಿ, ವರ್ಗಾವಣೆ ನಿರಂತರ ಪ್ರಕ್ರಿಯೆಯಾಗಿರುತ್ತದೆ. ವಿದೇಶಗಳಲ್ಲಿ ಉದ್ಯೋಗ, ಶಿಕ್ಷಣ ನಿಮಿತ್ತ ನೆಲೆಸಿರುವ ಭಾರತೀಯ ಪ್ರಜೆಗಳಿಗೆ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. ನಮೂನೆ-6 ರಲ್ಲಿ ಅರ್ಜಿಯನ್ನು ಅಗತ್ಯ ದಾಖಲೆಯೊಂದಿಗೆ ಸಂಬಂಧಿಸಿದ ಮತದಾರರ ನೋಂದಾಣಾಧಿಕಾರಿಗಳಿಗೆ ಅಂಚೆ ಅಥವಾ ಆನ್‌ಲೈನ್ ಮೂಲಕ ಸಲ್ಲಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

# ಸುದೀರ್ಘ ಸಂಘರ್ಷಕ್ಕೆ ಸಿಲುಕಿದ ಸಿರಿಯಾದಲ್ಲಿ ಜಲಸಂಕಷ್ಟ

ಮಿಲಾನೋ, ಜ 7- ದೀರ್ಘ ಕಾಲದಿಂದ ಆಂತರಿಕ ಸಂಘರ್ಷದಲ್ಲಿ ಸಿಲುಕಿದ್ದ ಸಿರಿಯಾದಲ್ಲಿ ಈಗ ನೀರು ಇನ್ನಷ್ಟು ಘರ್ಷಣೆಗೆ ಕಾರಣವಾಗುವ ಸಾಧ್ಯತೆ ಇದೆ.

ಸಿರಿಯಾದ ನೂತನ ಸರ್ಕಾರದ ನಂಬಿಕಾರ್ಹತೆಗೆ ಜಲ ಸುರಕ್ಷತೆ ಒದಗಿಸುವುದು ಪ್ರಮುಖ ಸವಾಲಾಗಿದೆ. ಸಿರಿಯಾದಲ್ಲಿ 2011 ರಿಂದಲೂ ನೀರಿನ ಕೊರತೆ ಇದೆ. ರಾಜಕೀಯ ಹಾಗೂ ಆರ್ಥಿಕ ಲಾಭ ಪಡೆಯುವ ಸಲುವಾಗಿ ಇಲ್ಲಿನ ಹಲವಾರು ಸಂಘಟನೆಗಳು ನೀರನ್ನೇ ದಾಳವಾಗಿ ಬಳಸಿಕೊಳ್ಳುತ್ತಿವೆ. ಇದರ ಜೊತೆಗೆ ಪರಿಸರ ಬದಲಾವಣೆ, ಸುದೀರ್ಘ ಬರ ಹಾಗೂ ನೀರಿನ ಕೊರತೆಗಳು ಜನರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಿವೆ.

2010ಕ್ಕೆ ಮುಂಚೆ ನಗರ ಪ್ರದೇಶಗಳ ಶೇ. 98 ಹಾಗೂ ಗ್ರಾಮೀಣ ಭಾಗದ ಶೇ. 92 ಮನೆಗಳು ಸುರಕ್ಷಿತ ನೀರಿನ ಸಂಪರ್ಕ ಹೊಂದಿದ್ದವು. ಈಗ ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಸಂಘರ್ಷದ ಕಾರಣದಿಂದಾಗಿ 2/3ಷ್ಟು ಜಲ ಸಂಸ್ಕರಣ ಘಟಕಗಳಿಗೆ ಹಾನಿಯಾಗಿದೆ. ನೀರು ಪೂರೈಕೆಗೆ ಬಳಸಲಾಗುವ ಪಂಪ್ ಕೇಂದ್ರಗಳ ಪೈಕಿ ಅರ್ಧದಷ್ಟು ಹಾನಿಗೀಡಾಗಿವೆ.

ಇಷ್ಟೇ ಅಲ್ಲದೇ ಸಿರಿಯಾದ ಶೇ. 50 ರಿಂದ 95ರಷ್ಟು ನೀರಾವರಿ ವ್ಯವಸ್ಥೆ ನಾಶವಾಗಿದೆ. ರಷ್ಯಾ, ಅಸಾದ್ ಆಡಳಿತ ಹಾಗೂ ಇಸ್ಲಾಮಿಕ್ ಸ್ಟೇಟ್‌ಗಳು ನಡೆಸಿದ ದಾಳಿಗಳೇ ಇದಕ್ಕೆ ಕಾರಣ.

ಸಿರಿಯಾದ ಸುಮಾರು 70 ಲಕ್ಷ ಜನರು ಆಂತರಿಕವಾಗಿ ಸ್ಥಳಾಂತರಗೊಂಡಿದ್ದಾರೆ. ಅಲ್ಲದೇ ಸುಮಾರು 1.3 ಕೋಟಿ ಜನ ದೇಶಬಿಟ್ಟು ಪಲಾಯನ ಮಾಡಿದ್ದಾರೆ. ಶೇ. 90ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. 1.2 ಕೋಟಿ ಸಿರಿಯನ್ನರು ಆಹಾರ ಅಸುರಕ್ಷತೆ ಎದುರಿಸುತ್ತಿದ್ದಾರೆ. 65 ಲಕ್ಷದಷ್ಟು ಜನರು 2022ರಿಂದಲೇ ಕಾಲರಾ ಭೀತಿ ಎದುರಿಸುತ್ತಿದ್ದಾರೆ.



2006 ರಿಂದ 2010ರ ನಡುವೆ ಸಿರಿಯಾದಲ್ಲಿ ಬರ ಪರಿಸ್ಥಿತಿ ಉಂಟಾಗಿತ್ತು. ಅಸಾದ್ ಆಡಳಿತದ ವಿರುದ್ಧ 2011ರಲ್ಲಿ ಜನ ಬಂಡಾಯ ಏಳಲು ಇದೇ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ನಂತರದಲ್ಲಿ ಆರಂಭವಾದ ಆಂತರಿಕ ಸಂಘರ್ಷ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವಂತೆ ಮಾಡಿದೆ. ಸಂಘರ್ಷದಲ್ಲಿ ತೊಡಗಿದ್ದವರು ಮೂಲಭೂತ ಸೌಲಭ್ಯಗಳ ಮೇಲೆ ದಾಳಿ ನಡೆಸಿದ್ದಾರೆ. ನಾಗರಿಕರ ಮೇಲೆ ನಿಯಂತ್ರಣ ಪಡೆಯುವ ಸಲುವಾಗಿ ವಿದ್ಯುತ್ ಹಾಗೂ ನೀರಿನ ಸೌಲಭ್ಯಗಳನ್ನು ಹಾಳುಗೆಡವಿದ್ದಾರೆ.

ಸ್ಥಳೀಯ ಜನರನ್ನು ಶಿಕ್ಷಿಸುವ ಸಲುವಾಗಿ ಅಸಾದ್ ಆಡಳಿತ 2017ರಲ್ಲಿ ಅಲ್-ಬಾಬ್ ನಗರದ ನೀರು ಪೂರೈಕೆ ಕೇಂದ್ರವನ್ನು ಹಾಳುಮಾಡಿತ್ತು. ಇದೇ ರೀತಿ ಟರ್ಕಿ ಸೈನ್ಯವು 2016 ರಿಂದ 2022ರ ನಡುವೆ ಹಲವು ಜಲ ಕೇಂದ್ರಗಳ ಮೇಲೆ ದಾಳಿ ನಡೆಸಿತ್ತು ಇಲ್ಲವೇ ವಶಕ್ಕೆ ತೆಗೆದುಕೊಂಡಿತ್ತು. 2023ರಲ್ಲಿ ಟರ್ಕಿಯ ಸೈನಿಕ ಪಡೆಗಳು ಜಲ ಕೇಂದ್ರಗಳ ಮೇಲೆ ದಾಳಿ ನಡೆಸಿದ ಕಾರಣದಿಂದಾಗಿ ಲಕ್ಷಾಂತರ ಜನರು ಸಮಸ್ಯೆ ಎದುರಿಸಬೇಕಾಯಿತು.

ಯುನಿಸೆಫ್ ವರದಿಯ ಪ್ರಕಾರ 2019 ಒಂದರಲ್ಲೇ 46 ಜಲ ಸೌಲಭ್ಯಗಳ ಮೇಲೆ ದಾಳಿ ನಡೆಸಲಾಗಿದೆ. ಇಂತಹ ದಾಳಿಗಳು ಹಾಗೂ ವಿಧ್ವಂಸಕ ಕೃತ್ಯಗಳ ಕಾರಣದಿಂದಾಗಿ ಜಲ ಸಮೃದ್ಧವಾಗಿರುವ ಲಡಾಕಿಯ ಮುಂತಾದ ಪ್ರದೇಶಗಳು ಸಹ ನೀರಿನ ಸಮಸ್ಯೆ ಎದುರಿಸುತ್ತಿವೆ.

ರಾಜಧಾನಿ ಡಮಸ್ಕಸ್ ಸಹ ಇಂತಹ ಸಮಸ್ಯೆಯಿಂದ ಮುಕ್ತವಾಗಿಲ್ಲ. 2017ರಲ್ಲಿ ನಡೆದ ದಾಳಿಯ ಕಾರಣದಿಂದಾಗಿ ರಾಜಧಾನಿಯ ಸುಮಾರು 50 ಲಕ್ಷ ಜನ ಸುರಕ್ಷಿತ ನೀರಿನ ಸಂಪರ್ಕದಿಂದ ವಂಚಿತರಾಗಿದ್ದರು. ಪರಿಸರ ಬದಲಾವಣೆ ಹಾಗೂ 2023ರಲ್ಲಿ ಸಂಭವಿಸಿದ ಭೂಕಂಪದ ರೀತಿಯ ಘಟನೆಗಳು ಸಮಸ್ಯೆ ಉಲ್ಬಣಿಸುವಂತೆ ಮಾಡಿವೆ.

ಅಸಾದ್ ಆಡಳಿತ ಅಂತ್ಯವಾದರೂ ಸಿರಿಯಾದಲ್ಲಿ ಸಂಘರ್ಷ ಅಂತ್ಯವಾಗುವ ಸೂಚನೆಗಳು ಕಂಡು ಬಂದಿಲ್ಲ. ಕುರ್ದಿಷ್ ನೇತೃತ್ವ ಹೊಂದಿರುವ ಸಿರಿಯನ್ ಡೆಮಾಕ್ರೆಟಿಕ್ ಫೋರ್ಸಸ್ ಮೇಲೆ ಟರ್ಕಿ ದಾಳಿ ನಡೆಸಿದೆ. 2019-24ರ ನಡುವೆ ಸಿರಿಯಾದ ಈಶಾನ್ಯ ಭಾಗದಲ್ಲಿನ ಅನಿಲ ಹಾಗೂ ವಿದ್ಯುತ್ ಘಟಕಗಳೂ ಸೇರಿದಂತೆ ನಾಗರಿಕ ಸೌಲಭ್ಯಗಳ ಮೇಲೆ ಟರ್ಕಿ ದಾಳಿ ನಡೆಸಿದೆ. ಇದರಿಂದ ಈ ಭಾಗದಲ್ಲಿ ನೀರಿನ ಕೊರತೆ ತೀವ್ರವಾಗಿದೆ. ಯುಫ್ರೇಟಿಸ್ ಹಾಗೂ ಟಿಗ್ರಿಸ್ ನದಿಗಳ ಮೇಲೆ ಟರ್ಕಿ ಹಿಡಿತ ಹೊಂದಿರುವ ಕಾರಣ ಸಿರಿಯಾದ ಜಲ ಭದ್ರತೆಯ ಮೇಲೆ ಪರಿಣಾಮವಾಗಿದೆ.

ಈ ನಡುವೆ ಗೋಲನ್ ಹೈಟ್ಸ್ ಅನ್ನು ಇಸ್ರೇಲ್ ಅತಿಕ್ರಮಿಸಿಕೊಂಡಿದೆ. ಇದೂ ಸಿರಿಯಾದ ಜಲಭದ್ರತೆಯ ಮೇಲೆ ಪರಿಣಾಮ ಬೀರಿದೆ. ಸಿರಿಯಾದ ಕ್ವೈನೆಟ್ರಾ ಪ್ರದೇಶ ಈಗಾಗಲೇ ನೀರಿನ ಬಿಕ್ಕಟ್ಟಿನಿಂದ ಬಳಲುತ್ತಿದೆ. ಗೋಲನ್ ಹೈಟ್ಸ್ ವಶ ಈ ಪ್ರದೇಶದ ಸಮಸ್ಯೆ ಇನ್ನಷ್ಟು ಹೆಚ್ಚಿಸಲಿದೆ.

ಅಸಾದ್ ಸರ್ಕಾರದ ಪತನದ ನಂತರ ಹಯಾತ್ ತಹರೀರ್ ಅಲ್ ಶಾಮ್ ನೇತೃತ್ವದ ಪಡೆಗಳು ಅಧಿಕಾರಕ್ಕೆ ಬಂದಿವೆ. ಆದರೆ ವರ್ಷಗಳ ಯುದ್ಧ ಹಾಗೂ ಹಿಂದಿನ ಸರ್ಕಾರದ ದುರಾಡಳಿತದಿಂದ ಉಂಟಾಗಿರುವ ಪರಿಣಾಮಗಳನ್ನು ನಿವಾರಿಸುವುದು ಅಷ್ಟು ಸುಲಭವಿಲ್ಲ.

ಸಿರಿಯಾ ಎದುರಿಸುತ್ತಿರುವ ನೀರಿನ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಹೊಸ ರಾಜಕೀಯ ಯೋಜನೆಗಳು ಹಾಗೂ ಕ್ರಮಗಳ ಅಗತ್ಯವಿದೆ. ಸಮುದಾಯಗಳು ಹಾಗೂ ಪ್ರಾಂತ್ಯಗಳ ನಡುವಿನ ಬಿಕ್ಕಟ್ಟುಗಳನ್ನು ಬಗೆಹರಿಸಬೇಕಿದೆ. ನೆರೆ ದೇಶಗಳ ಜೊತೆಗಿನ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಿದೆ.





## ಎಸ್ಸೆಸ್ ಆರೋಗ್ಯ ವಿಚಾರಿಸಿದ ಗಣ್ಯರು

ಬೆಂಗಳೂರು, ಜ. 7 - ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಜವಳಿ ವರ್ತಕ ಬಿ.ಸಿ. ಉಮಾಪತಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮತ್ತು ದಾವಣಗೆರೆ ಕಾಂಗ್ರೆಸ್ ಮುಖಂಡರಾದ ಮಾಲತೇಶ್‌ರಾವ್ ಜಾಧವ್, ಅನಿತಾಬಾಯಿ ಮಾಲತೇಶ್‌ರಾವ್ ಜಾಧವ್, ಬಿ.ಹೆಚ್. ವೀರಭದ್ರಪ್ಪ ಮತ್ತು ಇತರರು ಭೇಟಿ ಮಾಡಿ ಆರೋಗ್ಯ ಕುಶಲೋಪರಿ ವಿಚಾರಿಸಿದರು.

## ಭಾರತದಲ್ಲಿ ಎ.ಐ., ಕ್ಲೌಡ್ ವಿಸ್ತರಣೆಗಾಗಿ ಮೈಕ್ರೋಸಾಫ್ಟ್‌ನಿಂದ 3 ಶತಕೋಟಿ ಡಾಲರ್ ಹೂಡಿಕೆ

ಬೆಂಗಳೂರು, ಜ. 7 - ಭಾರತದಲ್ಲಿ ಕ್ಲೌಡ್ ಕಂಪ್ಯೂಟಿಂಗ್ ಹಾಗೂ ಕೃತಕ ಬುದ್ಧಿವಂತಿಕೆ ಸಾಮರ್ಥ್ಯ ವಿಸ್ತರಣೆಗಾಗಿ 3 ಶತಕೋಟಿ ಡಾಲರ್ ಹೂಡಿಕೆ ಮಾಡಲಾಗುವುದು ಎಂದು ಮೈಕ್ರೋಸಾಫ್ಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತ್ಯ ನಡೆಲ್ಲಾ ತಿಳಿಸಿದ್ದಾರೆ.

2030ರ ವೇಳೆಗೆ ಭಾರತದಲ್ಲಿ 10 ಲಕ್ಷ ಜನರಿಗೆ ಎಐ ಕೌಶಲ್ಯ ಕಲಿಸಲಾಗುವುದು ಎಂದು ನಡೆಲ್ಲಾ ತಿಳಿಸಿದ್ದಾರೆ. ಟೆಕ್ ವಲಯದ ನವೋದ್ಯಮ ಸ್ಥಾಪಕರು ಹಾಗೂ ಕಾರ್ಯಕಾರಿ ಅಧಿಕಾರಿಗಳ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮೈಕ್ರೋಸಾಫ್ಟ್ 3 ಶತಕೋಟಿ ಡಾಲರ್ ಹೂಡಿಕೆ ಮಾಡಲಿರುವುದು ಭಾರತದಲ್ಲಿನ ಅತಿ ದೊಡ್ಡ ವಿಸ್ತರಣೆಯಾಗಿದೆ. ಭಾರತದಲ್ಲಿ ಎಐ ಬೆಳವಣಿಗೆ ಉತ್ಸಾಹಕರವಾಗಿದೆ ಎಂದು ಹೇಳಿದರು. ಆದರೆ ಈ ಹೂಡಿಕೆಯ ಕಾಲಾವಧಿಯನ್ನು ಅವರು ತಿಳಿಸಿಲ್ಲ.

# ಯುವ ಪೀಳಿಗೆಗೆ ಪರಂಪರೆ ಪರಿಚಯಿಸುವ ಕೆಲಸ ಆಗಬೇಕು

### ಪ್ರೊ. ಸಿ.ವಿ. ಪಾಟೀಲ್ ರಚಿತ 'ಹರಿಹರ ತಾಲ್ಲೂಕು ಗೆಜೆಟಿಯರ್' ಪರಿಚಯ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್



ಹರಿಹರ, ಜ.7- ಮುಂದಿನ ಪೀಳಿಗೆಗೆ ಸಾಹಿತ್ಯದ ಮೂಲಕ ಸಾಂಸ್ಕೃತಿಕ ಪರಂಪರೆಗಳನ್ನು ಪರಿಚಯಿಸುವಂತಹ ಕೆಲಸವು ಹಿರಿಯ ಸಾಹಿತಿ ಗಳಿಂದ ಆಗುವಂತಾಗಲಿ ಎಂದು ಶಾಸಕ ಬಿ.ಪಿ ಹರೀಶ್ ಆಶಿಸಿದರು.

ನಗರದ ತಾಪಂ ಕಚೇರಿಯ ಸಭಾಂಗಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಸರ್ಕಾರ ಗೆಜೆಟಿಯರ ಇಲಾಖೆ ವತಿಯಿಂದ ಪ್ರೊ ಸಿ.ವಿ. ಪಾಟೀಲ್ ರಚಿಸಿರುವ ಹರಿಹರ ತಾಲ್ಲೂಕು ಗೆಜೆಟಿಯರ್ ಪರಿಚಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತ ನಾಡಿದರು.

ಹರಿಹರ ನಗರ ಮತ್ತು ಗ್ರಾಮೀಣ ಪ್ರದೇಶ ಗಳಲ್ಲಿ ಸಾಕಷ್ಟು ಸಾಹಿತಿಗಳಿದ್ದು, ಅವರಲ್ಲಿ ಇರುವಂತ ಅನೇಕ ವಿಚಾರಗಳನ್ನು ತಿಳಿಸುವಂತಹ ಕೆಲಸವಾದರೆ ಯುವ ಪೀಳಿಗೆಗೆ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ ಮೂಡುತ್ತದೆ. ಇದರಿಂದಾಗಿ ಸಮಾಜಕ್ಕೆ ಸಾಕಷ್ಟು ಅನುಕೂಲ ಕೂಡಾ ಆಗುತ್ತದೆ ಎಂದು ಹೇಳಿದರು.

ತಹಶೀಲ್ದಾರ್ ಗುರುಬಸವರಾಜ್ ಮಾತ ನಾಡಿ, ನಮ್ಮಲ್ಲಿನ ಅಂಕಿ ಅಂಶಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಸಿದ್ದತೆ ಆಗಬೇಕಾದರೆ, ದತ್ತಾಂಶ ಬಹಳಷ್ಟು ಪ್ರಾಮುಖ್ಯತೆ ಹೊಂದಿದೆ. ದತ್ತಾಂಶ ಸಂಗ್ರಹಿಸುವುದು ಸುಲಭವಾದುದ್ದಲ್ಲ, ಆದರೆ ಹಿರಿಯ ಸಾಹಿತಿ ಸಿ.ವಿ. ಪಾಟೀಲ್‌ರವರು ಗೆಜೆಟಿಯರ್ ಪುಸ್ತಕದಲ್ಲಿ ಬಹಳ ಅದ್ಭುತ ಅಂಶಗಳು ಹಾಗೂ ಮಾಹಿತಿ ಸಂಗ್ರಹಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಇಂದಿನ ಕಾಲದಲ್ಲಿ ಕವನ ಕಾವ್ಯ ಮತ್ತು ವಿಮರ್ಶಕ ಗ್ರಂಥಗಳನ್ನು ಬರೆಯುವುದು ಸುಲಭ. ಆದರೆ ಇತಿಹಾಸ ಪುಟಗಳಲ್ಲಿ ಸೇರಿರುವಂತಹ ಅಂಶಗಳನ್ನು ಸಂಗ್ರಹಿಸುವುದು ಕಷ್ಟಕರವಾಗಿದೆ. ಕಾರಣ ಗೆಜೆಟಿಯರ್ ಪ್ರಕಟಿಸಲು ತನ್ನದೇ ಆದ ಮಾನದಂಡಗಳು ಇರುತ್ತದೆ ಅವುಗಳನ್ನು ಒಳಗೊಂಡಂತೆ ಗೆಜೆಟಿಯರ್ ಪರಿಚಯ ಪ್ರಕಟಿಸಿ ರುವುದು ತಾಲೂಕಿನ ಜನತೆ ಹೆಮ್ಮೆಪಡುವಂತಹ ವಿಚಾರವಾಗಿದೆ ಎಂದು ಹೇಳಿದರು.

ಈ ವೇಳೆ ಹರಿಹರ ತಾಲ್ಲೂಕು ಗೆಜೆಟಿಯರ್ ಕೃತಿ ಕುರಿತು ನಿವೃತ್ತ ಪ್ರಾಚಾರ್ಯರಾದ ಪ್ರೊ. ಹೆಚ್ ಲಿಂಗಪ್ಪ, ಪ್ರೊ. ಬಾತಿ ಬಸವರಾಜ್, ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ್, ನಗರಸಭೆ ಅಧ್ಯಕ್ಷೆ ಕವಿತಾ, ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಕೆ. ರವಿಚಂದ್ರ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಟಿ.ಜೆ ಮುರುಗೇಶಪ್ಪ, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ದೂಡ ಮಾಜಿ ಸದಸ್ಯ ಹೆಚ್. ನಿಜಗುಣ, ಡಿ.ಎಂ. ಮಂಜುನಾಥಯ್ಯ, ಬಿ.ಬಿ ರೇವಣ್ಣನಾಯ್ಕ್, ಎ. ರಿಯಾಜ್ ಆಹ್ಮದ್, ವಿ.ಬಿ ಕೊಟ್ರೇಶಪ್ಪ, ಶೇಖರಗೌಡ ಪಾಟೀಲ್, ಹೆಚ್.ಸಿ. ಕೀರ್ತಿ ಕುಮಾರ್, ಹೆಚ್. ಬಿ. ರುದ್ರಗೌಡ್ರ ಯಕ್ಕೆಗೊಂದಿ ಇತರರು ಹಾಜರಿದ್ದರು.

# ಹಿರೇಕೆರೂರಿನಲ್ಲಿ 10-11ರಂದು ಕನ್ನಡದ ಹಬ್ಬ

## ಹಾವೇರಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆ ಸಿದ್ದ

ರಾಣೇಬೆನ್ನೂರು, ಜ. 7 - ಹಾವೇರಿ ಜಿಲ್ಲೆ ಹಿರೇಕೆರೂರಿನ ಪೊಲೀಸ್ ಮೈದಾನದಲ್ಲಿ ಇದೇ ದಿನಾಂಕ 10 ಹಾಗೂ 11 ರಂದು ನಡೆಯುವ 14ನೇ ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಇಂದು ನಡೆದಿದ್ದು, ಎರಡೂ ದಿನ ವಿವಿಧ ಗೋಷ್ಠಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 10 ರಂದು ಬೆಳಿಗ್ಗೆ 7.30ಕ್ಕೆ ರಾಷ್ಟ್ರಧ್ವಜ, ನಾಡಧ್ವಜ ಹಾಗೂ ಪರಿಷತ್ ಧ್ವಜಾರೋಹಣ ನಡೆಯಲಿದೆ. ನಂತರ 8.30ಕ್ಕೆ ಜಿ.ಬಿ.ಶಂಕರ್ ರಾವ್ ಸರ್ಕಲ್‌ನಿಂದ ಹೊರಡುವ ಸಮ್ಮೇಳನದ ಸರ್ವಾಧ್ಯಕ್ಷೆ ಬ್ಯಾಡಗಿಯ ಸಾಹಿತಿ ಸಂಕಮ್ಮ ಸಂಕಣ್ಣನವರ ಅವರ ಮೆರವಣಿಗೆಯು 10.30 ಕ್ಕೆ ಸಭಾ ಮಂಟಪಕ್ಕೆ ಬರಲಿದ್ದು, ಪರಿಷತ್ ಅಧ್ಯಕ್ಷ ಮಹೇಶ ಜೋಷಿ ಸಮ್ಮೇಳನ ಉದ್ಘಾಟಿಸುವರು. ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಶಾಸಕ ಉಜ್ಜನೇಶ ಬಣಕಾರ, ಮಾಜಿ ಸಚಿವ ಬಿ.ಸಿ. ಪಾಟೀಲ, ಸಂಸದ ಬಸವರಾಜ ಬೊಮ್ಮಾಯಿ ಭಾಗವಹಿಸುವರು.

ಬದುಕು ಬರಹದ ಪರಿಚಯ ಗೋಷ್ಠಿ, ನಂತರ 'ನಾಡ್ ನುಡಿ ನಾಡವರ್, ಹೊನ್ನ ಬಿತ್ತೇವು ಜಗಕೆಲ್ಲ' ವಿಷಯ ಕುರಿತು ಗೋಷ್ಠಿ. ಸಂಜೆ 5 ಕ್ಕೆ ವೈವಿಧ್ಯ ವಿಷಯ ಕುರಿತು ಗೋಷ್ಠಿ. ತದನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು.

11ರಂದು ಬೆಳಿಗ್ಗೆ ಕವಿಗಳ ಕಲರವ ಕಾವ್ಯ ಗೋಷ್ಠಿ, ಮಾನಿನಿ ಮನದಾಳ ಗೋಷ್ಠಿ, ನಾಡು ನುಡಿಗೆ ಜಿಲ್ಲೆಯ ಕೊಡುಗೆ, ಮಧ್ಯಾಹ್ನ ದಮನಿತರ ಧ್ವನಿ ಗೋಷ್ಠಿ. ನಂತರ ಹಿರೇಕೆರೂರು, ರಟ್ಟಿಹಳ್ಳಿ ತಾಲ್ಲೂಕುಗಳ ವೈಶಿಷ್ಟ್ಯ, ಬಹಿರಂಗ ಅಧಿವೇಶನ, ಸಂಜೆ ಸನ್ಮಾನ ನಂತರ ಸಮಾರೋಪ ಸಮಾರಂಭ ನಡೆಯಲಿದೆ. ಎಲ್ಲಡೆಯಂತೆ ಪುಸ್ತಕ ಮಾರಾಟ ಹಾಗೂ ಪ್ರದರ್ಶನ ಇದೆ. ಎರಡು ದಿನ ಮಧ್ಯಾಹ್ನ ಊಟದ ವ್ಯವಸ್ಥೆ ಇದೆ.

**45 ಲಕ್ಷ ರೂ. ಸಂಗ್ರಹ:** ಹಾವೇರಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಭೂ ಬಾಡಿಗೆಗೆ ಪಡೆದಿದ್ದು, ಅಲ್ಲಿ ಸಾಹಿತ್ಯ ಭವನದ ಕಟ್ಟಡ ಕಟ್ಟಲು ಸರ್ಕಾರ ಅನುದಾನ ಕೊಡಲು ನಿರಾಕರಿಸಿದ್ದರಿಂದ ಪರಿಷತ್‌ನ ಸ್ವಂತ ಜಾಗೆಯಲ್ಲಿ ಭವನ ನಿರ್ಮಿಸಿ, ಮಾರ್ಚ್ ತಿಂಗಳಿನಲ್ಲಿ ಉದ್ಘಾಟನೆ ಮಾಡುವ ಇರಾದೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನದ್ದಾಗಿದೆ. ಭವನ ನಿರ್ಮಾಣಕ್ಕೆ ಈಗಾಗಲೇ ಶಾಸಕರು ಸೇರಿದಂತೆ ಸಾರ್ವಜನಿಕರಿಂದ 45 ಲಕ್ಷ ಹಣ ಸಂಗ್ರಹಿಸಲಾಗಿದೆ.

# ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಂಘಕ್ಕೆ ಆಯ್ಕೆ



ದಾವಣಗೆರೆ, ಜ.7- ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್. ಹಾಲಪ್ಪ, ಉಪಾಧ್ಯಕ್ಷರಾಗಿ ಟಿ. ವೀರನಗೌಡ ಅವರು ಶಾಮನೂರು ಹೆಚ್.ಆರ್. ಲಿಂಗರಾಜ್ ಅವರ ಮುಂದಾಳತ್ವದಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎನ್.ಆರ್. ಮಂಜುನಾಥ್, ಎಸ್.ಜೆ. ಮಲ್ಲಿಕಾರ್ಜುನ್, ಹೆಚ್. ಶಿವಪ್ಪ, ರಾಜಪ್ಪ, ಟಿ.ವಿ. ತೇಜಪ್ಪ, ಕೆ. ಸುರೇಶ್, ಕೆ. ಗಿರೀಶ್, ಶ್ರೀಮತಿ ಪಿ.ಎನ್. ದಾನಮ್ಮ, ಶ್ರೀಮತಿ ಸಾವಿತ್ರಮ್ಮ ದೇವರಾಜ್, ವಿ.ಬಿ. ಮಂಜುನಾಥ್ ಅವರುಗಳು ನಿರ್ದೇಶಕರುಗಳಾಗಿ ಆಯ್ಕೆಯಾಗಿದ್ದಾರೆ. ಎಲ್. ಸತೀಶ್ ನಾಯ್ಕ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಡಿ.ಎಂ. ರುದ್ರಮುನಿ, ಶಿವಮೂರ್ತಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಗ್ರಾ.ಪಂ. ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ದಾವಣಗೆರೆ, ಜ. 7 - ಜಿಲ್ಲೆಯಲ್ಲಿನ 14 ಗ್ರಾಮ ಪಂಚಾಯಿತಿ ಗ್ರಂಥಾಲಯ ಮಾಹಿತಿ ಕೇಂದ್ರಗಳ 14 ಮೇಲ್ವಿಚಾರಕರ ಅರ್ಹ ಅಭ್ಯರ್ಥಿಗಳನ್ನು ಮೀಸಲಾತಿ ಮತ್ತು ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಆಯ್ಕೆ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ davanagere.nic.in ನಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು 15 ದಿನಗಳು ಮಾತ್ರ ಅವಕಾಶ ನೀಡಲಾಗಿದೆ. ನಿಗದಿತ ಕಾಲಮಿತಿಯೊಳಗೆ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಡಾ. ಸುರೇಶ್ ಬಿ.ಇಟ್ನಾಳ್ ತಿಳಿಸಿದ್ದಾರೆ.

# 2024ರಲ್ಲಿ ವಿದೇಶಾಂಗದಲ್ಲಿ ಭಾರತದ ದೃಢ ಹೆಜ್ಜೆ : ಹೊಸ ಸವಾಲುಗಳತ್ತ ಈಗ ಚಿತ್ತ

ನವದೆಹಲಿ, ಜ. 7- ವಿಶ್ವದ ಹಲವೆಡೆ ದೇಶಗಳ ನಡುವೆ ಬಿಕ್ಕಟ್ಟು ಉದ್ಭವಿಸಿದ್ದರೂ, ಭಾರತ ಮತ್ತು ಚೀನಾಗಳು ನಾಲ್ಕುವರೆ ವರ್ಷಗಳ ಗಡಿ ಚಕಮಕಿಯನ್ನು ಬಗೆಹರಿಸಿಕೊಂಡಿವೆ ಹಾಗೂ ವಿಶ್ವಾಸ ಹೆಚ್ಚಿಸುವತ್ತ ಹೊಸ ಹೆಜ್ಜೆಗಳನ್ನು ಪ್ರಕಟಿಸಿವೆ.

ಉಕ್ರೇನ್ ಹಾಗೂ ಇಸ್ರೇಲ್ ಸಮರಗಳ ಮಧ್ಯೆಯೂ ಭಾರತ ತನ್ನ ನೆರೆ-ಹೊರೆ ದೇಶಗಳ ಹಾಗೂ ದೂರದ ದೇಶಗಳ ಸಂಬಂಧಗಳನ್ನು ವೃದ್ಧಿಸುವತ್ತ 2024ರಲ್ಲಿ ಸಾಕಷ್ಟು ಹೆಜ್ಜೆಗಳನ್ನು ಇಟ್ಟಿದೆ. ಆದರೆ ಪಕ್ಕದ ಬಾಂಗ್ಲಾ ದೇಶದಲ್ಲಿ ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರು ಜನಾಂದೋಲನದ ಕಾರಣದಿಂದಾಗಿ ಪದಚ್ಯುತರಾಗಿ ಭಾರತಕ್ಕೆ ಬಂದಿದ್ದಾರೆ. ಅಮೆರಿಕಾದ ನೂತನ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಆಯ್ಕೆಯಾಗಿದ್ದಾರೆ. ಭಾರತದ ಸರಕುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದಾಗಿ ಟ್ರಂಪ್ ಹೇಳಿದ್ದಾರೆ. ಇದೆಲ್ಲವೂ ಹೊಸ ಸವಾಲುಗಳಿಗೆ ದಾರಿ ಮಾಡಿಕೊಟ್ಟಿವೆ.

ಇತ್ತೀಚಿನ ವರ್ಷಗಳಲ್ಲಿ ಭಾರತ ಹಾಗೂ ಅಮೆರಿಕಾದ ಸಂಬಂಧಗಳು ದೃಢವಾಗುತ್ತಿವೆ. ರಕ್ಷಣೆ, ಮಹತ್ವದ ತಂತ್ರಜ್ಞಾನ ಹಾಗೂ ಶುದ್ಧ ಇಂಧನ ಸೇರಿದಂತೆ ಹಲವು ವಲಯಗಳಲ್ಲಿ ಉಭಯ ದೇಶಗಳು ಹತ್ತಿರವಾಗುತ್ತಿವೆ. ಆದರೆ 'ಬಾಡಿಗೆ ಹತ್ಯೆ' ಪ್ರಕರಣದಲ್ಲಿ ಉಭಯ ದೇಶಗಳು ವಿರುದ್ಧ ದಿಕ್ಕಿಗೆ ನಿಂತಿದ್ದು ಕಂಡು ಬಂದಿತು.

ಕಳೆದ ವರ್ಷ ನ್ಯೂಯಾರ್ಕ್‌ನಲ್ಲಿ ಖಲಿಸ್ತಾನಿ ಪರ ಪ್ರತ್ಯೇಕತಾವಾದಿ ಗುರುಪಟ್ವಂತ್ ಸಿಂಗ್ ಪನ್ನುನ್ ಹತ್ಯೆಯ ವಿಫಲ ಯತ್ನದಲ್ಲಿ ಭಾರತೀಯರು ಭಾಗಿಯಾಗಿರುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಅಮೆರಿಕಾ ಒತ್ತಡ ಹೇರಿತ್ತು. ಭಾರತೀಯ ನಿಖಿಲ್ ಗುಪ್ತ ಎಂಬುವವರು ಭಾರತ ಸರ್ಕಾರದ ಉದ್ಯೋಗಿಯ ಜೊತೆಗೂಡಿ ಹತ್ಯೆ ಸಂಚಿನಲ್ಲಿ ಭಾಗಿಯಾಗಿರುವುದಾಗಿ ಅಮೆರಿಕಾದ ಪ್ರಾಸಿಕ್ಯೂಟರ್‌ಗಳು ಆರೋಪ ದಾಖಲಿಸಿದ್ದರು.

ಭಾರತದ ಉಚ್ಚಾಯುಕ್ತ ಸಂಜಯ್ ವರ್ಮ ಸೇರಿದಂತೆ ದೇಶದ ಧೂತಾವಾಸದ ಹಲವು ಅಧಿಕಾರಿಗಳು ಖಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎಂದು ಕೆನಡಾ ಆರೋಪಿಸಿತ್ತು. ಇದರಿಂದಾಗಿ ಉಭಯ ದೇಶಗಳ ನಡುವಿನ ಸಂಬಂಧ ತೀವ್ರವಾಗಿ ಹದಗೆಟ್ಟಿತ್ತು.

ಈ ಆರೋಪವನ್ನು ತಳ್ಳಿಹಾಕಿದ್ದ ಭಾರತ, ವರ್ಮಾ ಅವರನ್ನು ವಾಪಾಸ್ ಕರೆಸಿಕೊಂಡಿತು. ಭಾರತದ ರಾಯಭಾರಿಗಳನ್ನು ಉಚ್ಚಾಟಿಸಿರುವು ದಾಗಿ ಕೆನಡಾ ಸರ್ಕಾರ ಹೇಳಿತ್ತು. ಭಾರತ ಸಹಾ ಕೆನಡಾದ ಉಚ್ಚಾಯುಕ್ತ ಸ್ಟೀವರ್ಟ್ ವೀಲರ್ ಹಾಗೂ ಇತರೆ ಐವರು ರಾಜತಾಂತ್ರಿಕರನ್ನು ಉಚ್ಚಾಟಿಸಿತ್ತು. ಆದರೆ ಈ



ನಡುವೆಯೂ ಪೂರ್ವ ಲಡಾಕ್‌ನ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ ಭಾರತ ಮತ್ತು ಚೀನಾ ನಡುವಿನ ಸೈನಿಕ ಬಿಕ್ಕಟ್ಟಿಗೆ ತೆರೆ ಎಳೆಯಲಾಗಿತ್ತು. 2020ರ ಜೂನ್ ತಿಂಗಳಲ್ಲಿ ಗಲ್ವಾನ್ ಕಣಿವೆಯಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವೆ ತೀವ್ರ ಸಂಘರ್ಷ ನಡೆದಿತ್ತು. ಇದರಿಂದಾಗಿ ಉಭಯ ದೇಶಗಳ ಸಂಬಂಧ 6 ದಶಕಗಳಲ್ಲೇ ತಳಮಟ್ಟಕ್ಕೆ ಕುಸಿದಿತ್ತು.

ಕಳೆದ ಅಕ್ಟೋಬರ್ 21ರಂದು ಉಭಯ ದೇಶಗಳು ಒಪ್ಪಂದಕ್ಕೆ ಬಂದಿದ್ದು, ಡೆಮ್‌ಚೋಕ್ ಹಾಗೂ ಡೆಪ್ಸಾನ್‌ಗಳಲ್ಲಿ ಸಂಘರ್ಷದ ಸ್ಥಳಗಳಿಂದ ಹಿಂದೆ ಸರಿಯಲು ಸಮ್ಮತಿಸಿವೆ.

ಅಕ್ಟೋಬರ್ 23ರಂದು ರಷ್ಯಾದಲ್ಲಿ ನಡೆದ ಬ್ರಿಕ್ಸ್ ಶೃಂಗ ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು 50 ನಿಮಿಷಗಳ ಭೇಟಿ ನಡೆಸಿದ್ದರು. ಭಾರತ ಮತ್ತು ಪಾಕಿಸ್ತಾನದ ಸಂಬಂಧಗಳಲ್ಲೂ ಕೆಲ ಸಕಾರಾತ್ಮಕ ಬೆಳವಣಿಗೆಗಳು ಕಂಡು ಬಂದವು. ವಿದೇಶಾಂಗ ಸಚಿವ ಎಸ್. ಜಯಶಂಕರ್ ಅವರು ಶಾಂಘೈ ಸಹಕಾರ ಒಕ್ಕೂಟದ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಇಸ್ಲಾಮಾಬಾದ್‌ಗೆ ತೆರಳಿದ್ದರು. ಸುಮಾರು ದಶಕಗಳ ನಂತರ ಪಾಕಿಸ್ತಾನಕ್ಕೆ ಈ ರೀತಿಯ ಭೇಟಿ ನೀಡಲಾಗುತ್ತಿದೆ.

ಆದರೆ ಬಾಂಗ್ಲಾ ದೇಶದ ಪ್ರಧಾನಮಂತ್ರಿ ಹಸೀನಾ ಅವರು ಪದಚ್ಯುತಗೊಂಡು ಭಾರತಕ್ಕೆ ಬಂದ ನಂತರ ಉಭಯ ದೇಶಗಳ ಸಂಬಂಧಗಳು ಹದಗೆಟ್ಟಿವೆ. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ನಿಯಂತ್ರಿಸಲು ಬಾಂಗ್ಲಾ ಹಂಗಾಮಿ ಸರ್ಕಾರದ ಮುಖ್ಯಸ್ಥ ಮಹಮ್ಮದ್ ಯೂನಸ್ ಅವರು ವಿಫಲರಾಗಿದ್ದಾರೆ.

ಹಸೀನಾ ಅವರನ್ನು ಹಸ್ತಾಂತರಿಸುವಂತೆ ಯೂನಸ್ ಸರ್ಕಾರ ರಾಯಭಾರಿ ಟಿಪ್ಪಣಿಯೊಂದನ್ನೂ ಸಹ ಕಳಿಸಿದೆ. ಇದು ಸಂಬಂಧಗಳು ಮತ್ತಷ್ಟು ಹದಗೆಡಲು ಕಾರಣವಾಗಬಹುದು.

ಮಾಲ್ಡೀವ್ಸ್ ಹಾಗೂ ನೇಪಾಳಗಳಲ್ಲಿರುವ ಚೀನಾ ಪರ ಸರ್ಕಾರಗಳ ನಾಯಕರ ಜೊತೆಗೂ ಭಾರತ ಸಂಪರ್ಕ ಬೆಳೆಸಿತ್ತು. ಕಳೆದ ಜೂನ್ ತಿಂಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮಾಲ್ಡೀವ್ಸ್ ಅಧ್ಯಕ್ಷ ಮಹ್ಮದ್ ಮುಯಿಜು, ನೇಪಾಳದ ಪ್ರಧಾನಮಂತ್ರಿ ಪುಷ್ಪ ಕಮಾಲ್ ದಾಹಾಲ್ ಪ್ರಚಂಡ ಹಾಗೂ ಶ್ರೀಲಂಕಾ ಅಧ್ಯಕ್ಷ ರಾಣಿಲ್ ವಿಕ್ರಮ ಸಂಘೆ ಪಾಲ್ಗೊಂಡಿದ್ದರು.

ರಷ್ಯಾ ಹಾಗೂ ಉಕ್ರೇನ್ ನಡುವಿನ ಸಂಘರ್ಷ ಈ ವರ್ಷ ತೀವ್ರಗೊಂಡಿತ್ತು. ಈ ನಡುವೆಯೇ ಉಭಯ ದೇಶಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಭೇಟಿ ನೀಡಿದ್ದರು. ಈ ವಲಯದಲ್ಲಿ ಶಾಂತಿ ನೆಲೆಸಲು ಸಕ್ರಿಯ ಪಾತ್ರ ನಿರ್ವಹಣೆಗೆ ಭಾರತ ಸಿದ್ಧವಿದೆ ಎಂದೂ ಮೋದಿ ಹೇಳಿದರು.

1991ರಲ್ಲಿ ಉಕ್ರೇನ್ ಸ್ವಾತಂತ್ರ್ಯ ಪಡೆದ ನಂತರ ಇದೇ ಮೊದಲ ಬಾರಿಗೆ ಭಾರತದ ಪ್ರಧಾನಿಯೊಬ್ಬರು ಆ ದೇಶಕ್ಕೆ ಭೇಟಿ ನೀಡಿದ್ದರು.

ಫೆಬ್ರವರಿ ತಿಂಗಳಲ್ಲಿ ಭಾರತೀಯ ನೌಕಾದಳದ 8 ಜನರನ್ನು ಬಂಧಿಸಲಾಗಿತ್ತು. ಇವರಲ್ಲಿ 7 ಜನ ಭಾರತಕ್ಕೆ ವಾಪಸ್ಸಾಗಿದ್ದಾರೆ. ಮರಣ ದಂಡನೆಗೆ ಗುರಿಯಾಗಿದ್ದ ಇವರನ್ನು ಮೂರುವರೆ ತಿಂಗಳ ನಂತರ ಭಾರತಕ್ಕೆ ಕರೆತರಲು ಸಾಧ್ಯವಾಯಿತು.

2024ರಲ್ಲಿ ನೆರೆ-ಹೊರೆಯ ದೇಶಗಳ ಜೊತೆಗೆ ಮಧ್ಯ ಏಷ್ಯಾದ ಹಲವು ದೇಶಗಳ ಜೊತೆಗೂ ಪ್ರಾಂತೀಯ ಸಂಪರ್ಕ ಸುಧಾರಿಸಲಾಗಿತ್ತು.

# ಪೋಷಕರು ಮಕ್ಕಳ ಮೇಲೆ ಒತ್ತಡ ಹೇರುತ್ತಿದ್ದಾರೆ



ದಾವಣಗೆರೆ, ಜ. 7 - ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪೋಷಕರು ಮಕ್ಕಳ ಮೇಲೆ ತೀವ್ರ ಒತ್ತಡ ಹೇರುತ್ತಿದ್ದಾರೆ, ಇದು ಸೂಕ್ತವಲ್ಲ ಎಂದು ಡಾ. ಮನೋಜ್‌ಕುಮಾರ್ ಎಸ್. ಪೂಜಾರ್ ಅಭಿಪ್ರಾಯಪಟ್ಟರು.

ಅವರು ನಗರದ ಪಿ.ಜೆ. ಬಡಾವಣೆಯಲ್ಲಿರುವ ಜೈನ್ ವಿದ್ಯಾಲಯದ 23ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಇಸ್ರೋದ ವಿಜ್ಞಾನಿ ಟಿ.ಎಸ್. ಗೋವಿಂದರಾಜು ಮಾತನಾಡಿ, ಇಸ್ರೋ ಕೈಗೊಂಡ ಸಾಧನೆಗಳ ಕಿರು ಪರಿಚಯ ಮಾಡಿದರು.

**ಜೈನ್ ವಿದ್ಯಾಲಯದ 23ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಡಾ. ಮನೋಜ್‌ಕುಮಾರ್ ಪೂಜಾರ್**

ಹೆಚ್. ರಮೇಶ್‌ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಮೇಶ್‌ಕುಮಾರ್ ಜೆ. ಶಾಲಾ ವಾರ್ಷಿಕ ವರದಿ ಓದಿದರು. ಸಯ್ಯೀದಾ ಖಾನಂ ಸ್ವಾಗತಿಸಿದರು. ಆಶಾ ನಿರೂಪಿಸಿದರು. ಅನಿತಾ ರಜಪೂತ್ ವಂದಿಸಿದರು.

ಇದೇ ಸಮಯದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ನೀಡಿ ಪುರಸ್ಕರಿಸಲಾಯಿತು.

# ಜನತೆಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ

**(1ನೇ ಪುಟದಿಂದ)** ತಾರಾತಮ್ಯ ಮಾಡುವುದಿಲ್ಲ ಎಂದು ಸಚಿವರಾದ ಎಸ್.ಎಸ್ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ಪಾಲಿಕೆಯ ಬಿಜೆಪಿಯ ಆಡಳಿತದಲ್ಲಿ ಬಿಜೆಪಿ ಸದಸ್ಯರಿಗೆ ಒಂದು ಕೋಟಿ ಅನುದಾನ ನೀಡಿದರೆ ಕಾಂಗ್ರೆಸ್ ಸದಸ್ಯರಿಗೆ ಐದು ಲಕ್ಷ ಅನುದಾನ ನೀಡುತ್ತಿದ್ದರು. ನಾವು ಹಾಗೇ ಮಾಡುವುದಿಲ್ಲ. ಎಲ್ಲಾ ಸದಸ್ಯರುಗಳನ್ನು ಒಗ್ಗೂಡಿಸಿಕೊಂಡು ಹೋಗುತ್ತೇವೆ. ಎಲ್ಲಾ ಸದಸ್ಯರುಗಳು ಜನತೆಯ ಸಮಸ್ಯೆಗಳಿಗೆ ಸ್ಪಂದಿಸಿ ಎಂದು ಸಚಿವರು ಕಿವಿಮಾತು ಹೇಳಿದರು.

ಆಯುಕ್ತರಾದ ರೇಣುಕಾ, ಮೇಯರ್ ಕೆ.ಚಮನ್ ಸಾಬ್, ಉಪಮೇಯರ್ ಸೋಗಿ ಶಾಂತ ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಆಶಾ ಉಮೇಶ್, ಸವಿತಾ ಗಣೇಶ್ ಹುಲ್ಮನಿ, ಸುಧಾ ಇಟ್ಟಿಗುಡಿ ಮಂಜುನಾಥ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಎ.ನಾಗರಾಜ್, ರಹೀಂ ಖಾನ್, ಉದಯ್ ಕುಮಾರ್, ಪಾಮೇನಹಳ್ಳಿ ನಾಗರಾಜ್, ಎಲ್.ಡಿ ಗೋಣೆಪ್ಪ, ಕೆ.ಎನ್ ವೀರೇಶ್, ಜಾಕೀರ್ ಅಲಿ, ನಾಮನಿರ್ದೇಶನರಾದ ಸದಸ್ಯ ಸಾಗರ್ ಎಲ್.ಎಂ ಹೆಚ್, ರುದ್ರೇಶ್ ಇತರರು ಉಪಸ್ಥಿತರಿದ್ದರು.

# ದಾದಿಯರಿಗೆ ಮಾರ್ಗದರ್ಶಕರಾಗಿದ್ದ ಮಹಾನ್ ತಾಯಿ ಡಾ. ನಿರ್ಮಲಾ ಕೇಸರಿ



**ಇಂದು ಡಾ. ನಿರ್ಮಲಾ ಕೇಸರಿ ಅವರ 9ನೇ ವರ್ಷದ ಪುಣ್ಯಸ್ಮರಣೆ**

ಡಾ. ನಿರ್ಮಲಾ ಕೇಸರಿ ಮೇಡಂ ಅವರ ಬಗ್ಗೆ ಬರೆಯಬೇಕೆಂದರೆ ತುಂಬಾ ಇದೆ. ಆದರೆ ನನಗೆ ಅವರ ಜೊತೆ ಕೆಲಸ ಮಾಡುವಾಗ ಆದ ಕೆಲವು ಅನುಭವಗಳನ್ನು ಚಿಕ್ಕದಾಗಿ ಹಂಚಿಕೊಳ್ಳಲು ಇಷ್ಟಪಡುತ್ತೇನೆ.

ಅವರ ಹೆಸರಿಗೆ ತಕ್ಕ ಹಾಗೆ ನಿರ್ಮಲ ಮನಸ್ಸುಳ್ಳವರಾಗಿದ್ದರು. ನರ್ಸಸ್ ಬಗ್ಗೆ ಅವರಿಗಿದ್ದ ಬಾಂಧವ್ಯ ತುಂಬ ವಿಭಿನ್ನವಾಗಿತ್ತು. ನಮ್ಮ ಜೊತೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ನಮಗೆ ಕೆಲಸ ಗೊತ್ತಿಲ್ಲ ಅಂದರೆ ಹೇಳಿಕೊಟ್ಟು ಕೆಲಸ ಮಾಡಿಸುತ್ತಿದ್ದರು. ನರ್ಸಸ್‌ಗೆ ರೋಗಿಯನ್ನು ನೋಡಿಕೊಳ್ಳಲು ಬೇಕಾಗಿರುವ Knowledge, Skills, Dedications & Honesty ಎಷ್ಟು ಮುಖ್ಯ ಎಂದು ಕಲಿಸಿಕೊಡುತ್ತಿದ್ದರು. ನಾವು ತಪ್ಪು ಮಾಡಿದಾಗ ನಮ್ಮನ್ನು ತಿದ್ದುವ ರೀತಿ ವಿಭಿನ್ನವಾಗಿತ್ತು. ನಮ್ಮ ಜೊತೆ ಕುಳಿತು ಮಾತನಾಡಿ, ನಮ್ಮ ತಪ್ಪು ಮನಮುಟ್ಟುವಂತೆ ಅರ್ಥ ಮಾಡಿಸುತ್ತಿದ್ದರು. ಅಲ್ಲದೆ ಕೆಲಸ ಮಾಡಲು ಉತ್ತೇಜಿಸುತ್ತಿದ್ದರು.ಇದರಿಂದ ನಮಗೆ ಚೆನ್ನಾಗಿ ಕೆಲಸ ಮಾಡಲು ಉತ್ತೇಜನ ಸಿಗುತ್ತಿತ್ತು.

ನರ್ಸಸ್‌ನ ವರ್ಕಿಂಗ್ ಸ್ಟ್ಯಾಂಡರ್ಡ್ಸ್ ಹೆಚ್ಚಿಸಿಕೊಳ್ಳಲು ಡಿಪ್ಲೋಮಾ ಟ್ರೈನ್ಡ್ ನರ್ಸಸ್‌ಗೋಸ್ಕರ ಟೀಚಿಂಗ್ ಪ್ರೋಗ್ರಾಂಗಳನ್ನು ಆಯೋಜಿಸಿದ್ದರು. ಎನ್ಐಸಿಯು, ಪಿಐಸಿಯು, ಕ್ಯಾಸ್ಯುಯಾಲಿಟಿಗಳಂತಹ ಏರಿಯಾಗಳಲ್ಲಿ ಕೆಲಸ ಮಾಡಲು ಸ್ಪೆಷಲ್ ನಾಲೆಡ್ಜ್ ಮತ್ತು ಸ್ಕಿಲ್ ಬೇಕೆಂದು ಗುರುತಿಸಿ ಮತ್ತು ಸಬ್ಜೆಕ್ಟ್‌ಗಳ ಕ್ಲಾಸ್ ಅನ್ನು ಶುರು ಮಾಡಿದರು. ಮೇಡಂ ಮತ್ತು ಇತರೆ ವೈದ್ಯರಾದ ಡಾ. ಬಾಣಾಪುರ ಮಠ, ಡಾ. ಗುರುಪ್ರಸಾದ್, ಡಾ.ಸುರೇಶ್ ಬಾಬು ಮತ್ತು ಇನ್ನಿತರೆ ವೈದ್ಯರಿಂದ ಕ್ಲಾಸಸ್ ಮಾಡಿಸುತ್ತಿದ್ದರು.

ಮೊದಲ ಬಾರಿಗೆ ದಾವಣಗೆರೆಯಲ್ಲಿ ಟ್ರೈನ್ಡ್ ನರ್ಸಸ್‌ಗೆ ಟೀಚಿಂಗ್ ಪ್ರೋಗ್ರಾಂ ಅನ್ನು ಶುರು ಮಾಡಿದ್ದು ಬಿಸಿಹೆಚ್‌ಐ ಅಲ್ಲಿ ಡಾ. ನಿರ್ಮಲಾ ಕೇಸರಿ ಅವರು. ಇದಲ್ಲದೇ ನರ್ಸಸ್‌ಗೆ ಹೊರಗಡೆ ಕಳುಹಿಸಿ ಟ್ರೈನಿಗ್ ಕೊಡಿಸಬೇಕೆಂದು ಪ್ರಯತ್ನಿಸುತ್ತಿದ್ದರು.

ಶ್ರೀನಗರ, ಕಾಶ್ಮೀರದಿಂದ ಮೇಡಂ ಅವರಿಗೆ ಒಂದುಪತ್ರ ಬಂದಿತ್ತು. ಅದರಲ್ಲಿ ಎನ್ಐಸಿಯು ಅಲ್ಲಿ ಕೆಲಸ ಮಾಡುವ ಇಬ್ಬರು ನರ್ಸಸ್‌ಗೆ ಸ್ಪೆಷಲ್ ಟ್ರೈನಿಂಗ್ ಕೊಡುತ್ತೇವೆಂದು ಬರೆಯಲಾಗಿತ್ತು. ಮೇಡಂ ಅವರು ನನಗೆ ಮತ್ತು ಶ್ರೀದೇವಿಯವರಿಗೆ ಕಳುಹಿಸಿಕೊಟ್ಟರು. ಆ ಒಂದು ಟ್ರೈನಿಂಗ್ ನನ್ನ ವೃತ್ತಿ ಜೀವನವನ್ನೇ ಚೇಂಜ್ ಮಾಡಿ ಬಿಟ್ಟಿತು. ಅಂದರೆ ನಾನು ಕಲಿಯಬೇಕಾಗಿರುವುದು ಬಹಳ ಇದೆ. ಕಲಿತು ಚೆನ್ನಾಗಿ ಕೆಲಸಮ ಮಾಡಿ ಬೇರೆಯವರಿಗೂ ಕಲಿಸಬೇಕೆಂದು ಅಂದುಕೊಂಡೆ. ನಂತರ ನರ್ಸಿಂಗ್ ಪುಸ್ತಕಗಳನ್ನು ಓದಲು ಪ್ರಾರಂಭಿಸಿದೆ. ಎಲ್ಲಿ ಕಾನ್ಫರೆನ್ಸ್ ನಡೆದರೂ ಭಾಗವಹಿಸುತ್ತಿದ್ದೆ.

1992ರಲ್ಲಿ ಬ್ರಿಟೀಷ್ ಕೌನ್ಸಿಲ್, ಯುನೈಟೆಡ್ ಕಿಂಗ್‌ಡಂ ಅವರಿಂದ ಕಾಮನ್ ವೆಲ್ತ್ ಕಂಟ್ರಿ ನರ್ಸಸ್‌ಗೆ ಸ್ಪೆಷಾಲಿಟಿ ಟ್ರೈನಿಂಗ್ ಕರೆದಿದ್ದರು. ಮೇಡಂ ಅವರಿಗೆ ಯು.ಕೆ.ಯಿಂದ ಪತ್ರ ಬಂದಿತ್ತು. ನನ್ನನ್ನು ಮೇಡಂ ಯುಕೆಗೆ ಕಳುಹಿಸಿಕೊಟ್ಟರು. ನಾರ್ತನ್ ಐರ್ಲೆಂಡ್‌ನಲ್ಲಿ ಒಂದುವರ್ಷಕ್ಕಾಗಿ ಪ್ಲೇಸ್‌ಮೆಂಟ್ ದೊರಕಿತು. ಈ ಟ್ರೈನಿಂಗ್ ತುಂಬಾ ಉಪಯುಕ್ತಕರವಾಗಿತ್ತು. ಹಿಂತಿರುಗಿದ ನಂತರ nenatal unit ಅಲ್ಲಿ ಕೆಲಸ ಮಾಡಲು ಮತ್ತು ಇತರೆ ನರ್ಸಸ್‌ಗೆ ಕಲಿಸಿಕೊಡಲು ತುಂಬಾ ಉಪಯೋಗವಾಯಿತು.

ಬಿಸಿಹೆಚ್‌ಐ ಓಪನ್ ಆದ ಮೇಲೆ ಕೆಲ ವರ್ಷಗಳ ನಂತರ ಡಾ. ಗುರುಪ್ರಸಾದ್ ಅವರು ಡಿ.ಎಂ. ನ್ಯೂನಾಟಾಲಜಿ ಮುಗಿಸಿ ಬಂದಿದ್ದರು. ಮೇಡಂ ಅವರ ಅಡ್ವೈಸ್ ಮತ್ತು ಸಪೋರ್ಟ್, ಮೋಟಿವೇಷನ್‌ನಿಂದ ಹೊಸ ಮೆಂಡಲ್ ನ್ಯೂನಟಾಲ್ ಯುನಿಟ್ ಅಲ್ಲಿ ಡಾ. ಗುರುಪ್ರಸಾದ್ ಅವರ ಜೊತೆಯಲ್ಲಿ ಕೆಲಸ ಮಾಡಲು ನನಗೆ ಸಿಕ್ಕ ಟ್ರೈನಿಂಗ್ ತುಂಬಾ ಉಪಯುಕ್ತವಾಯಿತು. ಮೇಡಂ ಅವರು ನನ್ನನ್ನು ಟ್ರೈನಿಂಗ್‌ಗೆ ಕಳುಹಿಸಿಕೊಟ್ಟ ಉದ್ದೇಶ ಉಪಯೋಗವಾಯಿತು. ಇದರಿಂದಾಗಿ ನನ್ನ ವೃತ್ತಿ ಜೀವನದಲ್ಲಿ ಮುನ್ನಡೆಯಲು ಸಾಧ್ಯವಾಯಿತು. ಇದೆಲ್ಲವೂ ಡಾ. ನಿರ್ಮಲಾ ಕೇಸರಿ ಮೇಡಂಗೆ ಸೇರ ಬೇಕಾದ ಮನ್ನಣೆ.

ಮೇಡಂ ಅವರು ಬಾಪೂಜಿ ನರ್ಸಿಂಗ್ ಕಾಲೇಜು ಇನ್‌ಚಾರ್ಜ್ ಆಗಿದ್ದರು. ಕರ್ನಾಟಕದ ಇತರೆ ನರ್ಸಿಂಗ್ ಸ್ಕೂಲ್ ಮತ್ತು ಕಾಲೇಜುಗಳಿಂದ ವಿದ್ಯಾರ್ಥಿಗಳು ಪೀಡಿಯಾಟ್ರಿಕ್ ನರ್ಸಿಂಗ್ ಪೋಸ್ಟಿಂಗ್‌ಗೆ ಬರುತ್ತಿದ್ದರು. ಡಾ. ನಿರ್ಮಲಾ ಕೇಸರಿ ಅವರು ಟ್ರೈನಿಂಗ್ ಪ್ರೋಗ್ರಾಂ ಅನ್ನು ಆಯೋಜಿಸುತ್ತಿದ್ದರು. ಈ ಟ್ರೈನಿಂಗ್ ಪ್ರೋಗ್ರಾಂ ಇಷ್ಟುವರ್ಷದಿಂದ ಈಗಿನವರೆಗೂ ನಡೆಯುತ್ತಾ ಇದೆ.

ಬಿಸಿಹೆಚ್‌ಐನಲ್ಲಿ ಸ್ಟೇಟ್ ಲೆವೆಲ್ ನರ್ಸಿಂಗ್ ಕಾನ್ಫರೆನ್ಸ್‌ಗಳನ್ನು ಮೇಡಂ ಆಯೋಜಿಸುತ್ತಿದ್ದರು ಇದನ್ನೆಲ್ಲಾ ವಿಚಾರಿಸಿ ನೋಡಿದಾಗ ನಿರ್ಮಲಾ ಕೇಸರಿ ಅವರಿಗೆ ನರ್ಸಸ್‌ಗೆ ಕಲಿಸಲು ಎಷ್ಟು ಆಸಕ್ತಿ ಇತ್ತು ಎಂದು ಗೊತ್ತಾಗುತ್ತದೆ. ಏಕೆಂದರೆ ರೋಗಿಯ ಆರೈಕೆ ಮಾಡಲು ನರ್ಸಿಂಗ್ ಕೇರ್ ಬಹಳ ಮುಖ್ಯವಾಗಿತ್ತು.

ಕೊನೆಯದಾಗಿ ಮೇಡಂ ಅವರು ಹೇಳುತ್ತಿದ್ದ ಒಂದು ನುಡಿಮುತ್ತನ್ನು ಹೇಳಲು ಬಯಸುತ್ತೇನೆ.

ನರ್ಸಸ್ ಮೆಕ್ಯಾನಿಕಲ್ ಆಗಿ ಕೆಲಸ ಮಾಡದೇ ಹೃದಯ ಪೂರ್ಕವಾಗಿ ಕೆಲಸ ಮಾಡಬೇಕು. ಅಂದರೆ ಮೆಕ್ಯಾನಿಕ್ಸ್ ಮತ್ತು ಟೆಕ್ನಿಷಿಯನ್ಸ್ ಮೆಷೀನ್‌ಗಳ ಜೊತೆ ಕೆಲಸ ಮಾಡುತ್ತಾರೆ. ಆದರೆ ಅವುಗಳಿಗೆ ನೋವು, ಸಂಕಟ, ಭಾವನೆಗಳು, ಜೀವ ಇರುವುದಿಲ್ಲ. ಆರೆ ನಾವು ಕೂಡಾ ಕಾಂಪ್ಲೆಕ್ಸ್ ಮಷೀನ್ ಜೊತೆ ಕೆಲಸ ಮಾಡುತ್ತೇವೆ. (ಹ್ಯೂಮನ್ ಬಾಡಿ). ಇದಕ್ಕೆ ನೋವು, ಸಂಕಟ, ಭಾವನೆ, ಜೀವ ಮತ್ತು ಕುಟುಂಬವಿರುತ್ತದೆ ಎಂದು ಯಾವಾಗಲೂ ಹೇಳುತ್ತಿದ್ದರು.



- ಶ್ರೀಮತಿ ಎ.ಟಿ. ಸರ್ವಮಂಗಳ, ನಿವೃತ್ತ ಶುಶ್ರೂಷಕ ಅಧಿಕಾರಿ, ಬಾಪೂಜಿ ಮಕ್ಕಳ ಆಸ್ಪತ್ರೆ, ದಾವಣಗೆರೆ

# ಬಾಣಂತಿಯರ ಚಿಕಿತ್ಸೆಗೆ ನಿರ್ಲಕ್ಷ್ಯ

**(1ನೇ ಪುಟದಿಂದ)** ಮೃತ ತಾಯಂದಿರ ಮನೆಗೆ ಭೇಟಿ ಕೊಟ್ಟಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೃತ ಬಾಣಂತಿ ಕುಟುಂಬಕ್ಕೆ 25 ಲಕ್ಷ ರೂ. ನೀಡಬೇಕು. ಮಗುವನ್ನು ದತ್ತು ಪಡೆಯಬೇಕು. ಅದರ ಶಿಕ್ಷಣ ಸೇರಿದಂತೆ ಎಲ್ಲ ಜವಾಬ್ದಾರಿಯನ್ನು ಸರಕಾರ ವಹಿಸಬೇಕು ಎಂದು ಲಮಾಣಿ ಆಗ್ರಹಿಸಿದರು.

ದಾವಣಗೆರೆ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇದ್ದು, ಭರ್ತಿ ಮಾಡಬೇಕು. ಎರಡೂ ಆಸ್ಪತ್ರೆಗಳಿಗೆ ಇನ್ನಷ್ಟು ಸಿಬ್ಬಂದಿ ನೇಮಿಸಬೇಕಿದೆ. ಹೈ ರಿಸ್ಕ್ ಪ್ರೆಗ್ನೆನ್ಸಿ ಇದ್ದವರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಇದರಿಂದ ಸಮಸ್ಯೆ ಉಲ್ಬಣವಾಗುತ್ತದೆ ಎಂದರು.

ಹೆರಿಗೆ ಆಸ್ಪತ್ರೆಯಲ್ಲಿ ಐಸಿಯು ಅಥವಾ ಕ್ರಿಟಿಕಲ್ ಕೇರ್ ಇದ್ದಲ್ಲಿ ಸಾವಿನ ಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವಿದೆ. ಸರ್ಕಾರವು ಕ್ಲಿಷ್ಟಕರ ಸಮಸ್ಯೆ ಇದ್ದ ರೋಗಿಗಳಿಗೆ ಬೇಕಾದ ವ್ಯವಸ್ಥೆ ಮಾಡಬೇಕಿದೆ ಎಂದು ಆಗ್ರಹಿಸಿದರು.

ಪಶ್ಚಿಮ ಬಂಗಾಳದ ಔಷಧಿ ಕಂಪೆನಿಯಿಂದ ಸರಬರಾಜಾದ ಔಷಧಿ ಕಳಪೆ ಎಂದು ಡ್ರಗ್ ಕಂಟ್ರೋಲರ್ ಮಾಹಿತಿ ನೀಡಿದ್ದರೂ ಅದನ್ನು ನಿರ್ಲಕ್ಷಿಸಲಾಗಿದೆ.

ದಾವಣಗೆರೆ ಸಿ.ಜಿ. ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಅವರು 21-2-2024ರಂದು ಪಶ್ಚಿಮ ಬಂಗಾಲದಿಂದ ಬಂದ ಆರ್.ಎಲ್. ಸಲ್ಯೆನ್ ಸರಿ ಇಲ್ಲ ಎಂದು ಪತ್ರ ಬರೆದಿದ್ದರು. ಆದರೂ ಅದನ್ನೇ ಬಳಸಬೇಕೆಂಬ ಧೋರಣೆಯಿಂದ ಸರಕಾರ ನಡೆದುಕೊಂಡಿದೆ.

ಈ ಔಷಧಿಯ ಬಾಟಲಿಯಲ್ಲಿ ಫಂಗಸ್ ಬೆಳವಣಿಗೆ ಕುರಿತು ವೈದ್ಯರು ಶಂಕೆಯನ್ನೂ ವ್ಯಕ್ತಪಡಿಸಿದ್ದರು. ಪಶ್ಚಿಮ ಬಂಗಾಲದ ಈ ಔಷಧಿಯನ್ನು ರಾಜ್ಯದಾದ್ಯಂತ ಜಿಲ್ಲಾ, ತಾಲ್ಲೂಕು ಆಸ್ಪತ್ರೆ, ಪಿಎಚ್‌ಸಿಗಳಿಗೆ ಆಸ್ಪತ್ರೆಗಳಿಗೆ ಪೂರೈಸಲಾಗಿದೆ ಎಂದು ವಿವರಿಸಿದರು.

ಕಳೆದ ವರ್ಷ ಸಿಜಿ ಆಸ್ಪತ್ರೆಯಲ್ಲಿ 21 ಬಾಣಂತಿಯರ ಸಾವಾಗಿದ್ದರೆ, ಈ ಬಾರಿ ಈಗಾಗಲೇ 33 ಸಾವು ಸಂಭವಿಸಿದೆ. ಇನ್ನೂ 4 ತಿಂಗಳು ಬಾಕಿ ಇದೆ. ಇದು ಅತ್ಯಂತ ಕಳವಳಕಾರಿ ಎಂದು ಡಾ. ಚಂದ್ರು ಲಮಾಣಿ ಹೇಳಿದರು.

# ದೆಹಲಿ ವಿಧಾನಸಭಾ ಚುನಾವಣೆ

**(1ನೇ ಪುಟದಿಂದ)** ಎಂಬ ಕಾರಣಕ್ಕಾಗಿ ಬುಧವಾರ ಚುನಾವಣೆ ನಿಗದಿಪಡಿಸಲಾಗಿದೆ ಎಂದವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ. ಇದೇ ದಿನದಂದು ಉತ್ತರ ಪ್ರದೇಶದ ಮಿಲ್ಕಿಪುರ ಹಾಗೂ ತಮಿಳುನಾಡಿನ ಈರೋಡ್ ವಿಧಾನಸಭಾ ಕ್ಷೇತ್ರಗಳಿಗೂ ಉಪ ಚುನಾವಣೆ ನಡೆಯಲಿದೆ.

# ಸಿಸಿ ರಸ್ತೆ ಕಾಮಗಾರಿ ಕಳಪೆ : ಸ್ಥಳೀಯರ ದೂರು

ದಾವಣಗೆರೆ, ಜ.7 - ನಗರದ ಶಿವಕುಮಾರ ಬಡಾವಣೆಯ 1ನೇ ಹಂತದ 2ನೇ ಮುಖ್ಯ ರಸ್ತೆಯಲ್ಲಿ ಹೊಸದಾಗಿ ನಿರ್ಮಿಸಿದ ಸಿಸಿ ರಸ್ತೆಯಲ್ಲಿ ಬಿರುಕುಗಳು ಗೋಚರಿಸಿರುವುದರಿಂದ ಅಲ್ಲಿ ಕಳಪೆ ಕಾಮಗಾರಿ ನಡೆದಿದೆ ಎಂದು ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಆರೋಪಿಸಿದ್ದಾರೆ.

ಹದಡಿ ರಸ್ತೆಗೆ ಲಿಂಕ್ ಆಗಿರುವ ಈ ರಸ್ತೆಯು ನಂಜಪ್ಪ ಆಸ್ಪತ್ರೆಯ ಮುಂಭಾಗದಿಂದ ನಿಟ್ಟುವಳ್ಳಿ ಮುಖ್ಯ ರಸ್ತೆಯ ವರೆಗೂ 'ವೈಟ್ ಟ್ಯಾಪಿಂಗ್' ಮಾದರಿಯಲ್ಲಿ ಅರ್ಧ ಕಿ.ಮೀ ನಿರ್ಮಾಣವಾಗಿದ್ದು, ಈ ರಸ್ತೆ ಅವೈಜ್ಞಾನಿಕವಾಗಿದೆ ಎಂದು ಅಲ್ಲಿನ ಸ್ಥಳೀಯರು ದೂರುತ್ತಿದ್ದಾರೆ.

ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಅನುದಾನದಡಿ 75 ಲಕ್ಷ ರೂ.ಗಳ ವೆಚ್ಚದಲ್ಲಿ ಈ ಕಾಮಗಾರಿ ನಡೆದಿದ್ದು, ರಸ್ತೆ ನಿರ್ಮಾಣಗೊಂಡು ಒಂದೂವರೆ ತಿಂಗಳೂ ಆಗಿಲ್ಲ. ಆಗಲೇ ಈ ರಸ್ತೆ ಬಿರುಕು ಬಿಟ್ಟಿದೆ, ಅಲ್ಲದೆ ಚರಂಡಿ ಎತ್ತರಿಸಿ, ಅದರ ಮೇಲೆ ಕಲ್ಲು ಹೊದಿಸುವ ಕೆಲಸದಲ್ಲೂ ಕಳಪೆ ಆಗಿರುವುದು ಸಾಬೀತಾಗಿದೆ.

ಉತ್ತಮವಾಗಿದ್ದ ಡಾಂಬರ್ ರಸ್ತೆ ಮೇಲೆಯೇ ಈ ರಸ್ತೆ ಮಾಡಿದ್ದಾರೆ. ಸಿಸಿ ರಸ್ತೆಗೆ ಕಡಿಮೆ ಸಿಮೆಂಟ್



ಬಳಕೆ ಮಾಡಿರುವುದು ಮತ್ತು ಸರಿಯಾಗಿ ಕ್ಯೂರಿಂಗ್ ಮಾಡದಿರುವುದರಿಂದ ಇಲ್ಲಿ ಕಳಪೆ ಆಗಿದೆ ಎಂದು ಸ್ಥಳೀಯರು ಆಕ್ರೋಶ ಹೊರ

**ಕಾಮಗಾರಿ ಸಂಪೂರ್ಣ ಕಳಪೆ ಆಗಿದ್ದು, ಇದರಲ್ಲಿ ಶಾಸಕರದ್ದು ತಪ್ಪಿಲ್ಲ. ಆದರೆ ಸ್ಥಳೀಯ ಕಾಂಗ್ರೆಸ್ ಮುಖಂಡರ ನಿರ್ಲಕ್ಷ್ಯದಿಂದ ಈ ಕಳಪೆ ರಸ್ತೆ ನಿರ್ಮಾಣವಾಗಿದೆ. ಇದನ್ನು ಕೂಡಲೇ ಸರಿಪಡಿಸಬೇಕು.**
**ಇಲ್ಲದಿದ್ದರೆ ಜಿಲ್ಲಾಧಿಕಾರಿ ಹಾಗೂ ಸ್ಮಾರ್ಟ್ ಸಿಟಿ ಆಯುಕ್ತರಿಗೆ ಪತ್ರ ಬರೆಯಲಿದ್ದೇನೆ ಎಂದು ಕೆ.ಎಂ. ವೀರೇಶ್ ಎಚ್ಚರಿಕೆ ನೀಡಿದ್ದಾರೆ.**

**75 ಲಕ್ಷ ವೆಚ್ಚದಲ್ಲಿ ನಿರ್ಮಿಸಿದ ರಸ್ತೆ ಹಾಗೂ ಚರಂಡಿ ಹೊದಿಕೆ ಕಾಮಗಾರಿಯಲ್ಲೂ ಗುಣಮಟ್ಟವಿಲ್ಲ.**
**- ಕೆ.ಎಂ. ವೀರೇಶ್., ಪಾಲಿಕೆ ಸದಸ್ಯ**

ಹಾಕುತ್ತಿದ್ದಾರೆ.

ನೂತನ ರಸ್ತೆ ನಿರ್ಮಿಸುವ ಪೂರ್ವದಲ್ಲಿ ಮೊದಲಿದ್ದ ರಸ್ತೆಯನ್ನು ಅಗೆದು-ತೆಗೆದು, ಗ್ರಾವೆಲ್ ಬಳಸಿ ರೂಲರ್‌ನಿಂದ ರಸ್ತೆ ಗಟ್ಟಿಗೊಳಿಸಿದ ಬಳಿಕ ಕಾಂಕ್ರೀಟ್ ರಸ್ತೆ ಮಾಡಬೇಕಿತ್ತು ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

# ಎಸ್ಸಿ - ಎಸ್ಟಿ ಅನುದಾನ ಅಸಮರ್ಪಕ ಬಳಕೆ

**(1ನೇ ಪುಟದಿಂದ)** ಕೈಗೊಳ್ಳಬೇಕು, ಶಿಕ್ಷಕರಿಗೆ ನಿರಂತರ ತರಬೇತಿ ನೀಡಬೇಕು ಮತ್ತು ಅತಿಥಿ ಶಿಕ್ಷಕರ ಗೌರವಧನ ಹೆಚ್ಚಿಸುವ ಬಗ್ಗೆ ಪರಿಶೀಲನೆ ನಡೆಸಬೇಕು.

ಪ್ರತಿ ತಾಲೂಕು ಮಟ್ಟದಲ್ಲಿ ಕನಿಷ್ಠ ಒಂದು ಪಿಯು ವಸತಿ ಶಾಲೆ ಆರಂಭಿಸಬೇಕು, ಎಲ್ಲಾ ವಸತಿ ಶಾಲೆಗಳಲ್ಲಿ ಊಟದ ಗುಣಮಟ್ಟ ಕಾಯ್ದುಕೊಳ್ಳಬೇಕು, ಹಾಸಿಗೆ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಬೇಕು, ಮಕ್ಕಳ ಆರೋಗ್ಯ, ಪೌಷ್ಟಿಕಾಂಶಗಳ ತಪಾಸಣೆ ನಿಯಮಿತವಾಗಿ ನಡೆಸಬೇಕು.

ವಿವಿಧ ನಿಗಮಗಳಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳ ಸಂಖ್ಯೆ ಹೆಚ್ಚು ಮಾಡುವ ಕುರಿತು ಪರಿಶೀಲನೆ ಮಾಡಬೇಕು.

ನಿಗಮಗಳಲ್ಲಿ ಹಿಂದಿನ ವರ್ಷದ ಬಾಕಿ ಹಾಗೂ ಪ್ರಸ್ತುತ ವರ್ಷದ ಭೌತಿಕ ಗುರಿಯನ್ನು ಕಡ್ಡಾಯವಾಗಿ ಸಾಧಿಸಬೇಕು, ವಿವಿಧ ಯೋಜನೆಗಳಡಿ ಫಲಾನುಭವಿಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.

ವಸತಿ ನಿರ್ಮಾಣಕ್ಕೆ ಲಭ್ಯವಿರುವ ಅನುದಾನದಲ್ಲಿ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು, ಇದಕ್ಕಾಗಿ ಮನೆ ನಿರ್ಮಾಣದ ಯೂನಿಟ್ ವೆಚ್ಚ ಪರಿಷ್ಕರಿಸುವ ಕುರಿತು ಪರಿಶೀಲನೆ ನಡೆಸುವಂತೆ ಸೂಚಿಸಿದರು.

# ಶಾಸಕ ಬಸವರಾಜ್ ಪ್ರತಿಭಟನೆ

**(1ನೇ ಪುಟದಿಂದ)** ಅಮಾನತ್ತು ಮಾಡ ಬೇಕು. ಸೊಸೈಟಿ ಸೂಪರ್ ಸೀಡ್ ಮಾಡ ಬೇಕು. ಅಷ್ಟೇ ಅಲ್ಲದೇ ಚುನಾವಣೆಯನ್ನು ರದ್ದು ಮಾಡಬೇಕು, ಸೊಸೈಟಿಯಲ್ಲಿ ನಡೆದ ಅಕ್ರಮದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಶಾಸಕರ ಮನವೊಲಿಸಲು ಪ್ರಯತ್ನಪಟ್ಟರು. ನಂತರ ಶಾಸಕರಿಗೆ ಸದಸ್ಯ ಚುನಾವಣೆ ಮುಂದೂಡುವ ಭರವಸೆ ನೀಡಿದಾಗ ಶಾಸಕರು ಪ್ರತಿಟನೆ ಕೈ ಬಿಟ್ಟರು. ಅಕ್ರಮ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಅವರ ವಿರುದ್ಧ ಕ್ರಮ ಆಗುವವರೆಗೂ ಪ್ರತಿಭಟನೆ ನಡೆಸುವುದಾಗಿ ಶಾಸಕರು ಎಚ್ಚರಿಸಿದರು.

**ತನಿಖೆಗೆ ಆದೇಶ; ವರದಿ ಬಂದ ನಂತರ ಕ್ರಮ: ಡಿಸಿ**

ನಲ್ಲೂರು ಕೃಷಿ ಪತ್ತಿನ ಸಹಕಾರ ಸಂಘದ ವಿಷಯ ತಿಳಿದ ತಕ್ಷಣ ಅಪರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿ ಹೊನ್ನಾಳಿ, ಚನ್ನಗಿರಿ ತಹಶೀಲ್ದಾರ್ ನೇತೃತ್ವದಲ್ಲಿ ತನಿಖೆ ಮಾಡಲು ಆದೇಶಿಸಿರುವುದಾಗಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರ ಸ್ವಾಮಿ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತನಿಖೆ ನಡೆಸಿ ಮೂರು ದಿನಗಳ ಒಳಗೆ ವರದಿ ನೀಡಲು ಸೂಚಿಸಿದ್ದೇನೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಮತದಾರರ ಪಟ್ಟಿ ಸರಿ ಇಲ್ಲದಿದ್ದರೇ ಅದನ್ನು ತಿದ್ದುಪಡಿ ಮಾಡಲಾಗುವುದು. ಸದ್ಯ ಚುನಾವಣೆ ಮುಂದೂಡಲಾಗಿದೆ ಎಂದು ಹೇಳಿದರು.

# ಎಂಎಲ್ಸಿ ಸ್ಥಾನ ನೀಡಲು ಡಿಬಿ ಮನವಿ



ದಾವಣಗೆರೆ, ಜ. 7 - ನಿನ್ನೆ ನಗರಕ್ಕಾಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರಿಗೆ ತಮಗೆ ವಿಧಾನ ಪರಿಷತ್ ಸ್ಥಾನ ನೀಡಲು ಕೆಪಿಸಿಸಿ ಪ್ರಧಾನ ಕಾರ್ಯ ದರ್ಶಿ ಡಿ. ಬಸವರಾಜ್ ಮನವಿ ಮಾಡಿದರು. ಬಸವರಾಜ್ ಕಳೆದ ನಾಲ್ಕು ದಶಕ ಗಳಿಂದ ಕಾಂಗ್ರೆಸ್ ಪಕ್ಷದ ಸಂಘಟನೆ ಯಲ್ಲಿ ತೊಡಗಿಸಿ ಕೊಂಡಿದ್ದು, ವಿಧಾನ ಪರಿಷತ್ ಸ್ಥಾನ ನೀಡುವುದು ಸೂಕ್ತವಾ ಗಿದೆ ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸಿಎಂ ಗೆ ಮನವರಿಕೆ ಮಾಡಿದರು.

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆ, ಕ್ಲಬ್ ಪಾರ್ಕ್ ಹತ್ತಿರ 30x40 North, ಕೃಷಿ ಕೇಂದ್ರ ಹಿಂಭಾಗ 30x54 North, 30x70 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ತಕ್ಷಣ ಬೇಕಾಗಿದ್ದಾರೆ**
ಮಲೆಯಾಳಂ ಮಾತೃಭಾಷೆಯ ಮಲೆಯಾಳಂನ್ನು ಸ್ಪಷ್ಟವಾಗಿ ಓದಲು, ಬರೆಯಲು ಬರುವ ಹಾಗೂ ದಾವಣಗೆರೆ ಅಥವಾ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಾಮುಖ್ಯವಾಗಿ ವಕೀಲ ವೃತ್ತಿ ನಡೆಸುತ್ತಿರುವ ಅಥವಾ ಇನ್ನಾವುದೇ ವೃತ್ತಿಯಲ್ಲಿರುವ ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ವ್ಯವಹರಿಸಬಲ್ಲವರು ಬೇಕಾಗಿದ್ದಾರೆ.
96320 61441

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ. ಆಸಕ್ತರು ಸಂಪರ್ಕಿಸಿ.
98861 66432

**ಅಕೌಂಟೆಂಟ್ ಬೇಕಾಗಿದ್ದಾರೆ**
ಸೋಡಾ ಫ್ಯಾಕ್ಟರಿಗೆ B.Com Graduate ಆಗಿರುವ Tally ಕಲಿತಿರುವ ಅಕೌಂಟೆಂಟ್ ಬೇಕಾಗಿದ್ದಾರೆ. ಸಂಪರ್ಕಿಸಿ
81239 29086

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ ಅಥವಾ ಉತ್ತಮ ಕುಟುಂಬ (ಡ್ರೈವಿಂಗ್ ಬಲ್ಲ ಗಂಡ ಮತ್ತು ಮನೆ ಕೆಲಸದಲ್ಲಿ ಸಹಾಯ ಮಾಡಲು ಹೆಂಡತಿ) ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ. ಸಂಪರ್ಕಿಸಿ
88929 05208

**TO LET**
2 BHK House for Lease Doggalli Compound, Near LIC Office, K.R. Road, Davangere.
90359 66066

**ಕೆಲಸಕ್ಕೆ ಬೇಕಾಗಿದ್ದಾರೆ**
Mangala Homeopathy Clinic Receptionist ಕೆಲಸಕ್ಕೆ ಯುವಕ ಬೇಕಾಗಿದ್ದಾರೆ.
Qualification: SSLC / PUC
Dr. Gurudatta. L. Bannikod
96067 77108

**ಸೈಟ್ ಮಾರಾಟಕ್ಕಿದೆ**
ಹಳೆ ಕುಂದುವಾಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ, ಪೂರ್ವಾಭಿಮುಖ ಕಾರ್ನರ್ ಸೈಟ್ #4081/34, ಅಳತೆ : 40x50
97400 96577

**WANTED**
Marketing People's are Needed : Marketing Experience should be Eligible in the Candidate
Qualification 1) MBA, 2) Diploma Engineer Civil
Contact no. Details
83100 61181
For the purpose of Interior Surveillance. Immediate Hiring

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ 29.5 x70=2065 feet ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ
74119 19668

**Required**
Lady candidate for Office work
Good English communication with computer knowledge
P J Extension, Davangere.
99006 66122

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. (ಮೇಲ್ಕಂಡ ನಂಬರ್‌ಗೆ ಈ ಮೊದಲು ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)
94486 56091

**ತಕ್ಷಣ ಬೇಕಾಗಿದ್ದಾರೆ**
ಕಂಪ್ಯೂಟರ್ ಶಾಪ್‌ನಲ್ಲಿ ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
70195 12416

**ಮಳಿಗೆ ಬಾಡಿಗೆಗಿದೆ**
15x25 ಅಳತೆಯ ಮಳಿಗೆ ಬಾಡಿಗೆಗೆ ಇದೆ. ಮರಾಠ ಗಲ್ಲಿ ಮೇನ್ ರೋಡ್, ಹರಿಹರ.
98447 57474

**ರೆಸಿಪ್ಷನಿಸ್ಟ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
Davangere Heritage Lodging
Contact No.
9880101801
Address : Near SSIMS High-Tech Hospital, Kamath Resturant Building, DVG.

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48ರಲ್ಲಿ ಇರುವ ಬಿಪಿಸಿಎಲ್ ಪೆಟ್ರೋಲ್ ಬಂಕ್‌ನ 20 ಕೆಎಲ್ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ.
90082 28222, 99001 42052

**ಭಟ್ಟರು ಬೇಕಾಗಿದ್ದಾರೆ**
ಹೋಟೆಲ್ ಹೊಯ್ಸಳ
HEBBAL Toll ಹತ್ತಿರ
ವೆಜ್ & ನಾನ್‌ವೆಜ್
ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
99003 66782

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ನೇತ್ರ ದಾನ ಶ್ರೇಷ್ಠ ದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಡಿಪ್ರೆಶನ್, ಮೈಗ್ರೇನ್, ಕ್ಯಾನ್ಸರ್, ಕಿಡ್ನಿ ತೊಂದರೆ, ಅಸ್ತಮಾ, ಸೋರಿಯಾಸಿಸ್, ಡ್ರಗ್ಸ್ ಮುಂತಾದ ದುಶ್ಚಟಗಳು, ಗ್ರಹದೋಷ, ನಾಗದೋಷ, ಮಾಟ ಮಂತ್ರ, ಭೂತ ಪ್ರೇತಗಳ ಭಯ ಹಾಗೂ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗಾಗಿ (ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ ಡಿಸ್ಟೆನ್ಸ್ ಹೀಲಿಂಗ್ ಮಾಡುತ್ತೇವೆ)
80733 42011

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
91108 97420

**ಬೇಕಾಗಿದ್ದಾರೆ**
ಸೇಲ್ಸ್ ಎಕ್ಸ್‌ಕ್ಯೂಟಿವ್ ಬೇಕಾಗಿದ್ದಾರೆ ಡಿಪ್ಲೋಮಾ, ಯಾವುದೇ ಪದವಿ
ವಿಜಯ ಆಟೋ ಸೇಲ್ಸ್ & ಸರ್ವೀಸ್
ಡೀಲರ್ : ಐಷರ್ ಟ್ರಕ್ & ಬಸ್ ಮಾರಾಟಗಾರರು
ಡಿಸಿ ಆಫೀಸ್ ಹತ್ತಿರ, ಪಿಬಿ ರಸ್ತೆ, ದಾವಣಗೆರೆ.
94480 70098, 90712 65655

**ಶೀಘ್ರ ವಿವಾಹಕ್ಕೆ ಹಿಂದೂ ವಧುಗಳು ಬೇಕು**
ಸ್ವಂತ ಖರ್ಚಿನಲ್ಲಿ ಮದುವೆ ಆಗಲು ವಿದ್ಯಾವಂತ, ವ್ಯವಹಾರಸ್ಥ ವರಗಳು ಇರುತ್ತಾರೆ. ಆಸಕ್ತರು ಸಂಪರ್ಕಿಸಿ
ಹಿಂದೂ ಕಲ್ಯಾಣ ಕೇಂದ್ರ, ದಾವಣಗೆರೆ.
99456 82243

**CARS FOR SALE**
KIA Sonet Diesel
VW Taigun Automatic
KIA Carens 7 seater
New Hyundai I20
Contact : Daivik Iynahalli
99456 43223

**ಹುಡುಗರು ಬೇಕಾಗಿದ್ದಾರೆ**
ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್
ಸೋನಾಲಿಕಾ ಟ್ರ್ಯಾಕ್ಟರ್ ಬಿಡಿ ಭಾಗಗಳ ಅಧಿಕೃತ ಮಾರಾಟಗಾರರು
ಇವರಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಾವಣಗೆರೆ.
99729 74626

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ರೈಲ್ವೆಗೇಟ್ ಹತ್ತಿರ, ಕೊಟ್ಟೂರು ರಸ್ತೆಯ 2 ಬದಿಯಲ್ಲಿ 6.01 ಎಕರೆ, ಇನ್ನೊಂದು ಬದಿಯಲ್ಲಿ 6.11 ಎಕರೆ ಜಮೀನು ಮಾರಾಟಕ್ಕಿದೆ.
94499 90000

**CHANGE OF NAME**
I, Pujar Nanjappa Prakasha (Old Name) R/o # 173, Near Main Road, Kabburu Village, Davanagere Taluk, Davanagere Dist., Karnataka-577514. I have changed my name as K.N. Prakash (Kabbur Nanjappa Prakash) (New Name) vide affidavit on 1-1- 2025 sworn before Notary I.P. Brahamakumar, Davangere. In future all my dealings & transactions will be in my new name.- Sd/- K.N. Prakash

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮಾಲೀಕರಿಂದ ಸೈಟು ನೇರ ಮಾರಾಟಕ್ಕಿದೆ**
30x40 ಅಳತೆ, ಪಶ್ಚಿಮ ನಂ. 29, ವಾಜಪೇಯಿ ಬಡಾವಣೆ, ಜೆ.ಹೆಚ್. ಪಟೇಲ್ ಬಡಾವಣೆ ಪಕ್ಕ, ದಾವಣಗೆರೆ
97394 79103

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ ಹಾಗೂ ಹಗಲು ಕೆಲಸ ಮಾಡಲು ರೂಂ ಬಾಯ್ ಬೇಕಾಗಿದ್ದಾರೆ
63639 54459

**ತಕ್ಷಣ ಬೇಕಾಗಿದ್ದಾರೆ**
ಹೋಟೆಲ್ ಫುಡ್ಡೀಸ್ ನುರಿತ ವೇಟರ್‌ಗಳು ಬೇಕಾಗಿದ್ದಾರೆ. ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್, ಚರ್ಚ್ ರೋಡ್, ತೋಗಟವೀರ ಕಲ್ಯಾಣ ಮಂಟಪ ಹತ್ತಿರ, ದಾವಣಗೆರೆ. ಸಂಪರ್ಕಿಸಿ :
98861 56688

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

# ವಿದ್ಯಾರ್ಥಿಗಳ ಅನುಕೂಲಕ್ಕೆ ಹಾಸ್ಟೆಲ್‌ಗಳ ನಿರ್ಮಾಣ : ಸಚಿವ ಮಲ್ಲಿಕಾರ್ಜುನ್



ದಾವಣಗೆರೆ, ಜ. 7 - ಗುತ್ತಿಗೆದಾರರು ಉತ್ತಮ ಕಾಮಗಾರಿಗಳನ್ನು ನಿರ್ಮಾಣ ಮಾಡುವಂತೆ ಗಣಿ ಮತ್ತು ಭೂ ವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ತಿಳಿಸಿದರು.

ದೊಡ್ಡಬೂದಿಹಾಳ್ ಗ್ರಾಮದಲ್ಲಿ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ಹಾಗೂ ಬಿ. ಕಲಪನಹಳ್ಳಿ ಗ್ರಾಮದಲ್ಲಿ ರಾಜಕಾಲುವೆಯ ಹಳ್ಳಕ್ಕೆ ತಡೆಗೋಡೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಬಡವರ ಪಕ್ಷವೆಂದರೇ ಅದು ಕಾಂಗ್ರೆಸ್ ಪಕ್ಷ, ಉಪಯುಕ್ತ ಐದು ಗ್ಯಾರೆಂಟಿಗಳನ್ನು ತಂದು ನುಡಿದಂತೆ ನಡೆದಿದ್ದೇವೆ. ಜಿಲ್ಲೆಯಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಕಾಂಗ್ರೆಸ್ ಪಕ್ಷವು ಮುಂದಾಗಿದೆ. ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಿಗಳಲ್ಲಿರುವ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೂ ವಸತಿ ವ್ಯವಸ್ಥೆ ಲಭಿಸುವ ಹಿನ್ನೆಲೆ ದೊಡ್ಡಬೂದಿಹಾಳ್ ಗ್ರಾಮದಲ್ಲಿ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಪಘಾತಗಳನ್ನು ತಪ್ಪಿಸಲು ಬಿ. ಕಲಪನಹಳ್ಳಿ ಗ್ರಾಮದಲ್ಲಿ ತಡೆಗೋಡೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಗುತ್ತಿಗೆದಾರರು ಉತ್ತಮ ಕಾಮಗಾರಿ ನಿರ್ಮಾಣ ಮಾಡಬೇಕು ಹಾಗೂ ಇಂಜಿನಿಯರ್‌ಗಳು ಕಳಪೆ ಕಾಮಗಾರಿಯಾಗದಂತೆ ಜಾಗ್ರತಿ ವಹಿಸುವಂತೆ ಸಚಿವರು ಸೂಚಿಸಿದರು.

# ನಗರ ಪಾಲಿಕೆ ಬಜೆಟ್ : ಇಂದು ನಾಗರಿಕರ ಸಭೆ

ಮಹಾನಗರ ಪಾಲಿಕೆಯ 2025-26ನೇ ಸಾಲಿನ ಆಯ-ವ್ಯಯ ಅಂದಾಜು ಪಟ್ಟಿ ತಯಾರಿಸಬೇಕಾಗಿದ್ದು, ಈ ಸಂಬಂಧ ಸಲಹೆ ಸೂಚನೆಗಳನ್ನು ನೀಡಲು ಇಂದು ಬೆಳಿಗ್ಗೆ 11 ಗಂಟೆಗೆ ಸಂಘ-ಸಂಸ್ಥೆಗಳು ಮತ್ತು ಸಾರ್ವಜನಿಕರ ಸಭೆಯನ್ನು ಕರೆಯಲಾಗಿದೆ. ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಕರೆಯಲಾಗಿರುವ ಸಭೆಯ ಅಧ್ಯಕ್ಷತೆಯನ್ನು ಮಹಾಪೌರ ಕೆ. ಚಮನ್ ಸಾಬ್ ವಹಿಸುವರು ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ ತಿಳಿಸಿದ್ದಾರೆ.

# 11 ರಿಂದ ನಗರದ ವಸಂತ ರಸ್ತೆ ಶ್ರೀ ಉತ್ಸವಾಂಭ ದೇವಿ ಜಾತ್ರೆ



ದಾವಣಗೆರೆ, ಜ. 7 - ನಗರದ ವಸಂತ ರಸ್ತೆ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭದೇವಿ, ಶ್ರೀ ಚೌಡೇಶ್ವರಿದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮೀ ದೇವಿ ದೇವಸ್ಥಾನದಲ್ಲಿ ಇದೇ ದಿನಾಂಕ 11ರ ಶನಿವಾರದಿಂದ 13ರ ಸೋಮವಾರದವರೆಗೆ ಶ್ರೀ ದೇವಿಯವರ ಜಾತ್ರಾ ಮಹೋತ್ಸವ ನಡೆಯಲಿದೆ. 13ರಂದು ಬೆಳಗಿನ ಜಾವ 4-30ಕ್ಕೆ ತಾಯಿಯವರಿಗೆ ರುದ್ರಾಭಿಷೇಕ, ಸಹಸ್ರ, ಬಿಲ್ವಾರ್ಚನೆ, ಪುಷ್ಪ ಅಲಂಕಾರ ಪೂಜೆ ಹಾಗೂ 9-30 ರಿಂದ ಸರ್ವ ಭಕ್ತಾಧಿಗಳಿಗೂ ಉಡಿ ಅಕ್ಕಿ ಸೇವೆ ಮತ್ತು 12-30ಕ್ಕೆ ಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ ಮತ್ತು ಸಂಜೆ 5-30ಕ್ಕೆ ಮಾತ್ರೋತ್ರಿಯವರ ಮೆರವಣಿಗೆ ಇರುತ್ತದೆ. ಮೆರವಣಿಗೆ ವೇಳೆಯಲ್ಲಿ ಕನ್ಯೆಯರು, ಮುತ್ತೈದೆಯರು, ಕಳಸದೊಂದಿಗೆ ತಾಯಿಯವರನ್ನು ಸ್ವಾಗತಿಸಬೇಕಾಗಿ ಶ್ರೀ ಉತ್ಸವಾಂಭ ದೇವಸ್ಥಾನದ ಭಕ್ತ ಮಂಡಲಿ ವಿನಂತಿಸಿದೆ.

## ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ಆಯ್ಕೆ

ದಾವಣಗೆರೆ, ಜ. 7- ದಾವಣಗೆರೆ ವಿಶ್ವವಿದ್ಯಾನಿಲಯ ಪ್ರತಿನಿಧಿಸಿ ಸೌತ್ ಜೋನ್ ಇಂಟರ್ ಯೂನಿರ್ವಸಿಟಿಗೆ ಎವಿಂಇಟಿ ಚನ್ನೈನಲ್ಲಿ ನಡೆಯಲಿರುವ ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ನಗರದ ಎಜಿಬಿ ಕಾಲೇಜಿನ ಆರ್.ಪ್ರೇಮಾ, ಬಿ. ಸಂಧ್ಯಾ, ಎ.ಎಸ್. ವತ್ಸಲ, ಜಿ.ನೇತ್ರಾ ಅವರು ಆಯ್ಕೆಯಾಗಿದ್ದಾರೆ.





ದಾವಣಗೆರೆ ಹಳೇ ಹೆರಿಗೆ ಆಸ್ಪತ್ರೆಯಲ್ಲಿ ಬಿಜೆಪಿಯ ಸತ್ಯಶೋಧನಾ ಸಮಿತಿ ಸದಸ್ಯರು ಪರಿಶೀಲನೆ ನಡೆಸಿದರು.

# ನಗರದ ಆಸ್ಪತ್ರೆಗಳಲ್ಲಿ 'ಸತ್ಯಶೋಧನೆ' ಸಮಿತಿ

ದಾವಣಗೆರೆ, ಜ. 7- ರಾಜ್ಯದಲ್ಲಿ ಬಾಣಂತಿಯರ ಮತ್ತು ನವಜಾತ ಶಿಶುಗಳು ಮರಣ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬಿಜೆಪಿ ಸತ್ಯಶೋಧನ ಸಮಿತಿ ಮಂಗಳವಾರ ನಗರದಲ್ಲಿನ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿತು.

ಚಿಗಟೇರಿ ಜಿಲ್ಲಾಸ್ಪತ್ರೆ, ಚಾಮರಾಜ ವೃತ್ತದ ಬಳಿಯ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿದ ತಂಡವು, ಆಸ್ಪತ್ರೆ ಔಷಧಿ ಉಗ್ರಾಣ, ವಾರ್ಡ್‌ಗಳು ಮತ್ತು ಮಕ್ಕಳ ವಿಭಾಗಕ್ಕೆ ತೆರಳಿ ಪರಿಶೀಲನೆ ನಡೆಸಿತು.

ಶಾಸಕ ಡಾ. ಚಂದ್ರು ಲಮಾಣಿ, ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಡಾ. ವಿಜಯಲಕ್ಷ್ಮಿ ತುಂಗ, ಡಾ. ಪದ್ಮ ಪ್ರಕಾಶ್, ರಾಜ್ಯ ವಕ್ತಾರ ಅಶೋಕ್ ಗೌಡ ಇತರರು ತಂಡದಲ್ಲಿದ್ದರು.

ಸತ್ಯಶೋಧನ ಸಮಿತಿ ಸದಸ್ಯರು ಪ್ರಥಮವಾಗಿ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರೊಂದಿಗೆ ಸಭೆ ನಡೆಸಿದರು. ನಂತರ ಆಸ್ಪತ್ರೆ ಔಷಧಿ ಉಗ್ರಾಣ, ವಾರ್ಡ್‌ಗಳು ಮತ್ತು ಮಕ್ಕಳ ವಿಭಾಗಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ನಂತರ ಚಿಗಟೇರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ವೈದ್ಯಾಧಿಕಾರಿಗಳೊಂದಿಗೆ ಬಾಣಂತಿಯರ ಮತ್ತು ನವಜಾತ ಶಿಶುಗಳ ಸಾವಿನ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ ಕಡ್ಲೇಬಾಳು, ಅನಿಲ್ ಕುಮಾರ್ ನಾಯಕ್, ಐರಣಿ ಅಣ್ಣೇಶ್, ಮುಖಂಡರಾದ ಗಾಯತ್ರಿ ಸಿದ್ದೇಶ್ವರ, ಲೋಕಿಕೆರೆ ನಾಗರಾಜ್, ಜಿಲ್ಲಾ ವಕ್ತಾರ ಕೊಳೇನಹಳ್ಳಿ ಸತೀಶ್, ಸಾಮಾಜಿಕ ಜಾಲತಾಣ ಸಹ ಸಂಚಾಲಕ ಪ್ರದೀಪ್ ಕಾಡಾದಿ, ರಾಜ್ಯ ಮಹಿಳಾ ಉಪಾಧ್ಯಕ್ಷರಾದ ಜಯ ಎಚ್. ಸಿ, ರಾಜ್ಯ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಿಶ್ಚಿಮ ಗೌಡ್ರು, ಜಿಲ್ಲಾ ಮಾಧ್ಯಮ ಸಂಚಾಲಕ ಹೆಚ್.ಪಿ. ವಿಶ್ವಾಸ್, ಜಿಲ್ಲಾ ಸಾಮಾಜಿಕ ಜಾಲತಾಣ ಕೊಟ್ರೇಶ್ ಗೌಡ, ಹಾಲೇಶ್ ಇತರರು ಈ ಸಂದರ್ಭದಲ್ಲಿದ್ದರು.

# ನಗರಾದ್ಯಂತ ಗರೀಬ್ ನವಾಜ್ ಉರುಸ್ ಆಚರಣೆ





ದಾವಣಗೆರೆ, ಜ. 7 - ಅಜ್ಮೇರ್‌ನಲ್ಲಿರುವ ಸೂಫಿ ಸಂತರಾದ ಹಜರತ್ ಖ್ವಾಜಾ ಮೈನುದ್ದೀನ್ ಚಿಸ್ತಿ ಗರೀಬ್ ನವಾಜ್ (ರ.ಅ) ಅವರ 813ನೇ ಉರುಸ್ ಕಾರ್ಯಕ್ರಮವನ್ನು ನಗರಾದ್ಯಂತ ವಿವಿಧ ಸಂಘ - ಸಂಸ್ಥೆಗಳು ವಿಜೃಂಭಣೆಯಿಂದ ಆಚರಿಸಿದರು.

ಹೂವಿನ ಅಲಂಕಾರದಿಂದ ಬೀದಿಗಳನ್ನು ಶೃಂಗರಿಸಿ ದೀಪಾಲಂಕಾರ, ನೀರಿನ ಕಾರಂಜಿಗಳನ್ನು ಆಯೋಜಿಸಿರುವುದನ್ನು ಸಾರ್ವಜನಿಕರು ವೀಕ್ಷಿಸುವ ಮೂಲಕ ಸುಂದರವಾದ ಕ್ಷಣಗಳನ್ನು ಕಣ್ತುಂಬಿಕೊಂಡರು.

ಇಮಾಂ ನಗರದಲ್ಲಿರುವ ಗುಲಾಮಾನೆ ಗರೀಬ್ ನವಾಜ್ ಸಮಿತಿಯ ಆಶ್ರಯದಲ್ಲಿ ತಖರೀರ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಎರಡನೇ ದಿನ ಸಾರ್ವಜನಿಕ ಅನ್ನಸಂತರ್ಪಣೆ ಪ್ರಸಾದ ವಿನಿಯೋಗ ನಡೆಯಿತು.

ಕೆ.ಟಿ.ಜೆ. ನಗರ, ವಿನೋಬನಗರ, ಜಾಲಿ ನಗರ, ಆಜಾದ್ ನಗರ, ಭಾಷನಗರ, ಸೇರಿದಂತೆ ಆಜುಬಾಜಿನ ಪ್ರದೇಶದಲ್ಲಿ ಗರೀಬ್ ನವಾಜ್ ಉರುಸ್ ಅಂಗವಾಗಿ ಧ್ವನಿ ವರ್ಧಕಗಳಲ್ಲಿ ಖವ್ವಾಲಿ ನಾಥೇ ಷರೀಫ್‌ಗಳನ್ನು ಹಾಕಿ ಉರುಸ್ ನ ವಿಶೇಷತೆ ಬಿಂಬಿಸಿ ಫಾತೇಹಾ ಖ್ವಾನಿ ಹಮ್ಮಿಕೊಳ್ಳಲಾಗಿತ್ತು.

ನರಸರಾಜಪೇಟೆಯಲ್ಲಿರುವ ಮಸಜಿದ್- ಎ - ಆಜಾಂನಲ್ಲಿ ಅಸರ್ ನಮಾಜ್ ನಂತರ ಫಾತೀಹಾ ಖ್ವಾನಿ ಹಾಗೂ ಪ್ರಸಾದ ವಿನಿಯೋಗ ಮಾಡಲಾಯಿತು. ಹಾಫೀಜ್ ಮಹಮ್ಮದ್ ಗೌಸ್ ಮಾತನಾಡಿದರು.

# ಸ್ಮಾರ್ಟ್ ಸಿಟಿ ಕಾಮಗಾರಿ ಪರಿಶೀಲಿಸಿದ ಸವಿತಾ ಗಣೇಶ್



ದಾವಣಗೆರೆ, ಜ. 7- ದಾವಣಗೆರೆ ಸ್ಮಾರ್ಟ್ ಸಿಟಿ ವತಿಯಿಂದ ಅಭಿವೃದ್ಧಿ ಪಡಿಸಿ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಕೋರಿದ ಕಾಮಗಾರಿಗಳನ್ನು ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನೆ ಗಣೇಶ್ ಪರಿಶೀಲನೆ ನಡೆಸಿದರು.

ಪಾರ್ಕ್‌ಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿರುವ ಬಹುತೇಕ ಇ-ಟಾಯ್ಲೆಟ್‌ಗಳು ಸರಿಯಾದ ನಿರ್ವಹಣೆ ಇಲ್ಲದೆ ಸಾರ್ವಜನಿಕರ ಉಪಯೋಗಕ್ಕೆ ಬರದಂತಾಗಿವೆ ಮತ್ತು ಕಾರ್ಯ ನಿರ್ವಹಿಸದೆ ಇರುವ ಟಾಯ್ಲೆಟ್‌ಗಳನ್ನೂ ಕೂಡಲೇ ದುರಸ್ತಿಪಡಿಸಿ ಸರಿಯಾದ ನಿರ್ವಹಣೆಯ ವ್ಯವಸ್ಥೆಯೊಂದಿಗೆ ಹಸ್ತಾಂತರಿಸಲು ಸೂಚಿಸಿದರು.

ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ನಿರ್ಮಾಣವಾಗಿರುವ ರಾಜ ಕಾಲುವೆ ಕಾಮಗಾರಿ ವೀಕ್ಷಿಸಿ ಮಳೆ ನೀರು ಚರಂಡಿಗಳಲ್ಲಿರುವ ಹೂಳು ತೆಗೆಯಲು ಅಗತ್ಯ ಕ್ರಮ ಕೈಗೊಳ್ಳಲು ತಾಂತ್ರಿಕ ಅಭಿಯಂತರರಿಗೆ ಸೂಚನೆ ನೀಡಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಡಿಜಿಟಲ್ ಲೈಬ್ರರಿಗೆ ಭೇಟಿ ನೀಡಿ ಲೈಬ್ರರಿಯಲ್ಲಿ ಅಳವಡಿಸಿರುವ ಕಂಪ್ಯೂಟರ್ಸ್ ಮತ್ತು ಈ ಲೈಬ್ರರಿ ಅಪ್ಲಿಕೇಶನ್‌ನಲ್ಲಿರುವ ಪುಸ್ತಕಗಳನ್ನು ಪರಿಶೀಲಿಸಿ ಸಾರ್ವಜನಿಕರು ಇದರ ಉಪಯೋಗ ಪಡೆಯಲು ಹೆಚ್ಚು ಪ್ರಚಾರ ಮಾಡಲು ಮತ್ತು ಲೈಬ್ರರಿಯನ್ನು ಬಳಸುವ ವಿದ್ಯಾರ್ಥಿಗಳಿಗೆ ದೂರು ನೀಡಲು ಸಹಾಯವಾಣಿ ನಂಬರ್ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು.

ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಪಾಲಿಕೆಯ ಬಹುತೇಕ ವಾರ್ಡ್ ಗಳಲ್ಲಿ ಪಾಲಿಕೆ ಸದಸ್ಯರ ಮತ್ತು ಸಾರ್ವಜನಿಕರ ಮನವಿ ಮೇರೆಗೆ ಇತರೆ ಕಾಮಗಾರಿಗಳ ಪರಿಶೀಲನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸುಧಾ ಇಟ್ಟಿಗುಡಿ ಮಂಜುನಾಥ್, ಪಾಲಿಕೆ ಸದಸ್ಯರಾದ ಜಾಕೀರ್ ಅಲಿ, ಮಂಜುನಾಥ್ ಗಡಿಗುಡಾಳ್, ಕಬೀರ್ ಖಾನ್, ಮುಖಂಡರಾದ ಗಣೇಶ್ ಹುಲ್ಮನಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಾದ ವೀರೇಶ್ ಮತ್ತು ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳು ಹಾಜರಿದ್ದರು.

# ಡಿಸೋಜ ಭಾವಚಿತ್ರ ಸೆರೆ ಹಿಡಿದಿದ್ದ ಹೆಚ್‌ಬಿಎಂ



ದಾವಣಗೆರೆ, ಜ.7- ನಿನ್ನೆ ದೈವಾಧೀನರಾದ ನಾಡಿನ ಖ್ಯಾತ ಸಾಹಿತಿ ನಾ. ಡಿ ಸೋಜ ಅವರು ಈಗ್ಗೆ ಸುಮಾರು 35 ವರ್ಷಗಳ ಹಿಂದೆ ನಗರದ ಹಿರಿಯ ಪತ್ರಿಕಾ ಛಾಯಾಗ್ರಾಹಕ ಹೆಚ್.ಬಿ. ಮಂಜುನಾಥರ ಫೈನ್ ಆರ್ಟ್ ಫೋಟೋ ಸ್ಟುಡಿಯೋಗೆ ಬಂದು ತೆಗೆಸಿಕೊಂಡ ಅವರು ತುಂಬಾ ಮೆಚ್ಚಿಕೊಂಡ ಫೋಟೋ ಇದು.

ಅಂದೇ ಸ್ಟುಡಿಯೋದಲ್ಲಿ ನಾ ಡಿಸೋಜರ ಪತ್ರಿಕಾ ಸಂದರ್ಶನವನ್ನು ನಾಡಿನ ಹಿರಿಯ ಪತ್ರಿಕಾ ಅಂಕಣಕಾರ ಹೆಚ್. ಆನಂದರಾಮ ಶಾಸ್ತ್ರಿಯವರು ಮಾಡುವಾಗ ಚಿಂತಕರು, ಬರಹಗಾರರು, ಆಯುರ್ವೇದ ತಜ್ಞರು ಆದ ನಾಗಾನಂದ (ಡಾ.ವಿಶ್ವನಾಥರಾವ್) ಹಾಗೂ ಶಿಕ್ಷಕ ಪರಸಪ್ಪ ಅಲ್ಲಿದ್ದರು.

# ಮಾಧ್ಯಮ ಮಾನ್ಯತಾ ಸಮಿತಿ ಸದಸ್ಯರಾಗಿ ಮಂಜುನಾಥ್



ದಾವಣಗೆರೆ, ಜ.7- ಕರ್ನಾಟಕ ಮಾಧ್ಯಮ ಮಾನ್ಯತಾ ಸಮಿತಿಯನ್ನು ಪುನರ್‌ರಚಿಸಲಾಗಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ 'ವಿಜಯ ಕರ್ನಾಟಕ' ಹಿರಿಯ ಪ್ರಧಾನ ವರದಿಗಾರ ಯಳನಾಡು ಮಂಜು ನಾಥ್ ಸೇರಿದಂತೆ, 13 ಜನರನ್ನು ಸದಸ್ಯರ ನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಮಂಜುನಾಥ್ ಅವರನ್ನು ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಅಭಿನಂದಿಸಿದ್ದಾರೆ.



# ಕ್ರೀಡಾ ಪಟುಗಳಿಗೆ ಸಮವಸ್ತ್ರ ವಿತರಣೆ

ದಾವಣಗೆರೆ, ಜ. 7 - ಸೀನಿಯರ್ ನ್ಯಾಷನಲ್ ಕಬಡ್ಡಿ ಚಾಂಪಿಯನ್ ಶಿಪ್ ಪಂದ್ಯಾವಳಿಯು ದೊಡ್ಡಬಳ್ಳಾಪುರದಲ್ಲಿ ಇಂದಿನಿಂದ ಮೂರು ದಿನ ನಡೆಯಲಿದ್ದು, ದಾವಣಗೆರೆ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯಿಂದ ಆಯ್ಕೆ ಆದ ಕ್ರೀಡಾ ಪಟುಗಳಿಗೆ ಕಬಡ್ಡಿ ಒಳಾಂಗಣ ಕ್ರೀಡಾಂಗಣದಲ್ಲಿ ಸಮವಸ್ತ್ರ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆಯ್ಕೆಯಾದ ಕ್ರೀಡಾಪಟುಗಳಿಗೆ ಸ್ಥಳೀಯಯವರಾದ ಕಿರುತೆರೆ ನಟ ಗಿರೀಶ್ ಜತ್ತಿ, ಡಾ. ಮಲ್ಲಿನಾಥ್ ಅವರುಗಳು ಕ್ರೀಡಾಪಟುಗಳಿಗೆ ಸಮವಸ್ತ್ರ ವಿತರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಅಧ್ಯಕ್ಷ ಎಂ. ನಾಗರಾಜ್, ಸಂಘಟನಾ ಕಾರ್ಯದರ್ಶಿ ಶಂಕರ್ ಗಣೇಶ್, ಎಮ್. ಪಳನಿ ಸ್ವಾಮಿ, ವಾರ್ತಾ ಇಲಾಖೆಯ ನಿವೃತ್ತ ಉದ್ಯೋಗಿ ಬಿ.ಎಸ್. ಬಸವರಾಜ್, ತರಬೇತುದಾರ ದುರ್ಗಾಂಬಿಕ ಕ್ರೀಡಾ ಸಮಿತಿಯ ಎಚ್. ನಾಗರಾಜ್ ಉಪಸ್ಥಿತರಿದ್ದರು.


# ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್ ಚಾಂಪಿಯನ್‌ಶಿಪ್‌ಗೆ ಜಿ. ರೇವತಿ ಆಯ್ಕೆ



ದಾವಣಗೆರೆ, ಜ. 7 - ನಗರದ ಜಿಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿದ್ಯಾರ್ಥಿನಿ ಜಿ. ರೇವತಿ ಅವರು ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್ ಕಾರ್ಯಕ್ರಮಕ್ಕಾಗಿ ದೇಶಾದ್ಯಂತಆಯ್ಕೆಯಾಗಿರುವವಿದ್ಯಾರ್ಥಿಗಳಲ್ಲೊಬ್ಬರಾಗಿ ಮಾನ್ಯತೆ ಪಡೆದಿದ್ದಾರೆ.

ಈ ಕಾರ್ಯಕ್ರಮವನ್ನು ಭಾರತ ಸರ್ಕಾರದ ಯುವಕೋಶ ಇಲಾಖೆಯು ಆಯೋಜಿಸಿದ್ದು, ಇದೇ ದಿನಾಂಕ 11 ಮತ್ತು 12ರಂದು ನವದೆಹಲಿಯ ಭಾರತ್ ಮಂಡಪಂ ನಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ರೇವತಿ ಅವರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಸಂವಾದಿಸಲು ಅಪರೂಪದ ಅವಕಾಶ ದೊರೆತಿದೆ.

# ನಗರದ ಲಯನ್ಸ್ ಕ್ಲಬ್‌ಗೆ ಇಂದು ಪ್ರಾಂತೀಯ ಅಧ್ಯಕ್ಷ ಸತೀಶ್ ಭೇಟಿ



ಲಯನ್ಸ್ ಪ್ರಾಂತೀಯ ಅಧ್ಯಕ್ಷ ವೈ.ಬಿ. ಸತೀಶ್ ಅವರು ದಾವಣಗೆರೆ ಲಯನ್ಸ್ ಕ್ಲಬ್‌ಗೆ ಇಂದು ಅಧಿಕೃತ ಭೇಟಿ ನೀಡಲಿದ್ದು, ಈ ಸಂಬಂಧ ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10 ಗಂಟೆಗೆ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಾಸನ್ ಐ ಕೇರ್ ಆಸ್ಪತ್ರೆ ಸಹಯೋಗದೊಂದಿಗೆ ಮಕ್ಕಳಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ನೋಟ್ ಪುಸ್ತಕ, ಲೇಖನಿ ಸಾಮಾಗ್ರಿಗಳನ್ನು ವಿತರಿಸಲಾಗುತ್ತದೆ ಎಂದು ಲಯನ್ಸ್ ಕಾರ್ಯದರ್ಶಿಯೂ ಆಗಿರುವ ಶಿಕ್ಷಕ ಸಿ. ಅಜಯ್ ನಾರಾಯಣ್ ತಿಳಿಸಿದ್ದಾರೆ.

ನಂತರ ಸಂಜೆ 7.35ಕ್ಕೆ ಲಯನ್ಸ್ ಭವನದಲ್ಲಿ ಏರ್ಪಾಡಾಗಿರುವ ಸಭಾ ಕಾರ್ಯಕ್ರಮದಲ್ಲಿ ಲಯನ್ಸ್ ಪ್ರಾಂತೀಯ ಅಧ್ಯಕ್ಷ ವೈ.ಬಿ.ಸತೀಶ್ ಅವರನ್ನು ಬರ ಮಾಡಿಕೊಂಡು ಗೌರವಿಸಲಾಗುತ್ತದೆ. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳುವಯ್ಯ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಲಯನ್ಸ್ ಸದಸ್ಯರು ಈ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಲಯನ್ಸ್ ಸಹ ಕಾರ್ಯದರ್ಶಿ ಹೆಚ್. ಎಂ. ನಾಗರಾಜ್, ಖಜಾಂಚಿ ಎಸ್. ನಾಗರಾಜ್ ಕೋರಿದ್ದಾರೆ.

# ಮೈದೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಸರಸ್ವತಿ : ಲಾಟರಿ ಮೂಲಕ ಒಲಿದ ಅದೃಷ್ಟ



ಹರಪನಹಳ್ಳಿ, ಜ.7- ತಾಲ್ಲೂಕಿನ ಮೈದೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಮತ್ತಿಹಳ್ಳಿ ಸರಸ್ವತಿ ಆಯ್ಕೆಯಾಗಿದ್ದಾರೆ.

ಶಿವಮ್ಮ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಎಂ.ಸರಸ್ವತಿ ಹಾಗೂ ಮೀನಾಕ್ಷಮ್ಮ ಸ್ಪರ್ಧಿಸಿದ್ದರು. ಇಂದು ನಡೆದ ಚುನಾವಣೆಯಲ್ಲಿ ಇಬ್ಬರಿಗೂ ತಲಾ 10 ಮತಗಳು ಲಭಿಸಿದ ಕಾರಣ, ಲಾಟರಿ ಮೂಲಕ ಆಯ್ಕೆ ಪ್ರಕ್ರಿಯೆ ನಡೆಸಿದಾಗ ಎಂ. ಸರಸ್ವತಿ ಅವರಿಗೆ ಅದೃಷ್ಟ ಒಲಿಯಿತು. ಚುನಾವಣಾಧಿಕಾರಿಯಾಗಿ ತಹಶೀಲ್ದಾರ್ ಗಿರೀಶಬಾಬು ಕಾರ್ಯನಿರ್ವಹಿಸಿದರು.

ನಂತರ ಸರಸ್ವತಿ ಅವರು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನರವರ ನಿವಾಸಕ್ಕೆ ಭೇಟಿ ನೀಡಿ ಸಂತಸವನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಬಸಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಬೇರಗೌಡ, ತಾಪಂ ಮಾಜಿ ಸದಸ್ಯ ಮೈದೂರು ರಾಮಣ್ಣ, ಹೇಮಂತಪ್ಪ, ಲೋಕೇಶಗೌಡ್ರು, ವಿಜಯಕುಮಾರ, ಸಿದ್ದಲಿಂಗಸ್ವಾಮಿ, ಹೆಚ್. ದೇವೇಂದ್ರಗೌಡ, ಎಂ.ಕುಬೇರಪ್ಪ, ಶಿವಣ್ಣ, ಗ್ರಾ.ಪಂ. ಸದಸ್ಯರಾದ ಕೆ.ನಾಗರಾಜ, ಮಹಾಲಿಂಗಯ್ಯ, ಶಿವಕುಮಾರ, ಮಂಜಮ್ಮ ರಾಮಪ್ಪ, ಚಂದ್ರಪ್ಪ ಬಾವಿಹಳ್ಳಿ, ದುರುಗಪ್ಪ ಗೌರಿಪುರ, ನಾಗವೇಣಿ, ಎ. ಶಿವಮ್ಮ, ನಾಗಮ್ಮ, ಸೇರಿದಂತೆ ಇತರರು ಇದ್ದರು.

# ಭೂಕಂಪ ; ನಡುಗಿದ ಬಿಹಾರ ಜಿಲ್ಲೆಗಳು

ಪಾಟ್ನಾ, ಜ 7- ಟಿಬೆಟ್ ಹಾಗೂ ನೇಪಾಳದ ಬಳಿ ಸಂಭವಿಸಿದ ಭೂಕಂಪದ ಪರಿಣಾಮಗಳು ಬಿಹಾರದ ಹಲವು ಜಿಲ್ಲೆಗಳಲ್ಲಿ ಕಂಡು ಬಂದಿದೆ.

ಭೂಕಂಪದ ಕಾರಣದಿಂದಾಗಿ ಬಿಹಾರ ಹಾಗೂ ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ನೆಲ ನಡುಗಿದ ಅನುಭವವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಭೂಕಂಪದ ಕಾರಣದಲ್ಲಿ ಬಿಹಾರದಲ್ಲಿ ಯಾವುದೇ ಹಾನಿಯಾಗಿರುವ ವರದಿ ಬಂದಿಲ್ಲ ಎಂದವರು ಹೇಳಿದ್ದಾರೆ.

# ಇಂದು ರಾಜ್ಯ ಎಐಟಿಯುಸಿ ಸಮಿತಿ ಸಭೆ


ಎಐಟಿಯುಸಿ ರಾಜ್ಯ ಸಮಿತಿ ಸಭೆಯು ಮೈಸೂರಿನ ಇಂಟರ್ ನ್ಯಾಷನಲ್ ಯೂತ್ ಹಾಸ್ಟೆಲ್ ನಲ್ಲಿ ಇಂದು ಮತ್ತು ನಾಳೆ ನಡೆಯಲಿದೆ ಎಂದು ಎಐಟಿಯುಸಿ ರಾಜ್ಯ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

# ನಂಜಪ್ಪ ಆಸ್ಪತ್ರೆಯಲ್ಲಿ ಸಣ್ಣ ಕರುಳಿನ ಯಶಸ್ವಿ ಚಿಕಿತ್ಸೆ

## ಆಧುನಿಕ ತಂತ್ರಜ್ಞಾನ ಕ್ಯಾಪ್ಸುಲ್‌ಎಂಡೋಸ್ಕೋಪಿ ಕಾರ್ಯವಿಧಾನ ಬಳಕೆ

ದಾವಣಗೆರೆ, ಜ.7- ರೋಗಿಗೆ ಸಣ್ಣ ಕರುಳಿನಲ್ಲಿ ಉಂಟಾದ ಅತಿ ಅಪರೂಪದ ರಕ್ತ ಸ್ರಾವವನ್ನು ಆಧುನಿಕ ತಂತ್ರಜ್ಞಾನವಾದ ಕ್ಯಾಪ್ಸುಲ್ ಎಂಡೋಸ್ಕೋಪಿ ಕಾರ್ಯ ವಿಧಾನದಿಂದ ಪತ್ತೆ ಹಚ್ಚಿ ತುರ್ತಾಗಿ ಬೇಕಾದಂತಹ ಚಿಕಿತ್ಸೆಯನ್ನು ನಂಜಪ್ಪ ಆಸ್ಪತ್ರೆಯ ಪರಿಣಿತ ವೈದ್ಯರ ತಂಡ ಯಶಸ್ವಿಯಾಗಿ ನೀಡಿದೆ.

62 ವರ್ಷದ ವ್ಯಕ್ತಿ ಶಕ್ತಿ ಹೀನನಾಗಿ ದುರ್ಬಲತೆಯಿಂದ ಬಳಲುತ್ತಿದ್ದು, 4-5 ದಿನಗಳಿಂದ ಕಪ್ಪು ಬಣ್ಣದ ಮಲ ವಿಸರ್ಜನೆಯಾಗುತ್ತಿತ್ತು. ವ್ಯಕ್ತಿಯು ಆಸ್ಪತ್ರೆಗೆ ದಾಖಲಾದಾಗ, ಹೀಮೋಗ್ಲೋಬಿನ್ ಮಟ್ಟ ಬಹಳ ಕಡಿಮೆ ಇತ್ತು. ಪ್ರಾರಂಭದಲ್ಲಿ ರಕ್ತಸ್ರಾವದ ಮೂಲವನ್ನು ಕಂಡುಹಿಡಿಯಲು ಕಷ್ಟಕರವಾಗಿದ್ದರಿಂದ ಕ್ಯಾಪ್ಸುಲ್‌ಎಂಡೋಸ್ಕೋಪಿ ವಿಧಾನವನ್ನು ಬಳಸಲಾಯಿತು.



ಈ ವಿಧಾನವು ಅತ್ಯಂತ ಪರಿಣಾಮಕಾರಿಯಾಗಿದ್ದು, ನಿಖರವಾಗಿ ಚಿಕಿತ್ಸೆ ನೀಡಲು ಬಹಳ ಸಹಕಾರಿಯಾಗಿದೆ. ಗ್ಯಾಸ್ಟ್ರೋಎಂಟಿರೊಲೋಜಿಸ್ಟ್ ವೈದ್ಯ ಡಾ. ಶಿವರಾಜ್ ಅಫ್ಜಲ್‌ಪುರ್‌ಕರ್ ಈ ವಿಧಾನವೇ ಸೂಕ್ತವೆಂದು ನಿರ್ಣಯಿಸಿ ರಕ್ತಸ್ರಾವದ ಮೂಲವನ್ನು ಯಶಸ್ವಿಯಾಗಿ ಪತ್ತೆ ಹಚ್ಚಿದರು. ಸೂಕ್ತ ಚಿಕಿತ್ಸೆಯನ್ನು ಪ್ರಾರಂಭಿಸಿದರು.

**ಫಲಿತಾಂಶ** : ಕ್ಯಾಪ್ಸುಲ್‌ಎಂಡೋಸ್ಕೋಪಿ ಇತ್ತೀಚಿನ ತಂತ್ರಜ್ಞಾನವಾಗಿದ್ದು, ಜೀರ್ಣಾಂಗ ವ್ಯೂಹದ ವಿಶೇಷವಾಗಿ ಸಣ್ಣ ಕರುಳಿನಲ್ಲಿ ಉಂಟಾದ ತೊಂದರೆಗಳನ್ನು ಕಂಡುಹಿಡಿಯಲು ಸಹಾಯವಾಗುತ್ತದೆ. ರೋಗಿಗೆ ವೈರ್‌ಲೆಸ್ ಕ್ಯಾಮೆರಾವನ್ನು ಹೊಂದಿರುವ ಮಾತ್ರೆ ಗಾತ್ರದ ಕ್ಯಾಪ್ಸುಲ್ ಅನ್ನು ನುಂಗಿಸಿದಾಗ, ಅದು ಕರುಳಿಗೆ ಹೋಗುತ್ತದೆ. ನಂತರ ಆ ಕ್ಯಾಪ್ಸುಲ್ ಕರುಳಿನ ಭಾಗದಲ್ಲಿ ಉಂಟಾದ ರಕ್ತಸ್ರಾವ ಹಾಗೂ ಇನ್ನಿತರೆ ಸಮಸ್ಯೆಗಳ ಚಿತ್ರಗಳನ್ನು ಸೆರೆ ಹಿಡಿದು ರೆಕಾರ್ಡಿಂಗ್ ಸಾಧನಕ್ಕೆ ರವಾನಿಸುತ್ತದೆ. ಇದರಿಂದ ವೈದ್ಯರು ಖಚಿತವಾಗಿ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ.

ದಾವಣಗೆರೆ ನಂಜಪ್ಪ ಆಸ್ಪತ್ರೆಯಲ್ಲಿ ನವೀನತೆ ಹಾಗೂ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿರುವುದನ್ನು ಈ ವಿಧಾನವು ತೋರಿಸುತ್ತದೆ.

# ಮಹಿಳೆಯರಿಗೆ ಕೈ ಕಸೂತಿ ತರಬೇತಿ

ದಾವಣಗೆರೆ, ಜ. 7 - ಭಾರತ ವಿಕಾಸ ಪರಿಷತ್ ಗೌತಮ ಶಾಖೆ ದಾವಣಗೆರೆ ವತಿಯಿಂದ ಇಲ್ಲಿನ ವಿದ್ಯಾನಗರದಲ್ಲಿ ಮಹಿಳೆಯರಿಗೆ ಉಚಿತ ಕೈ ಕಸೂತಿ ತರಬೇತಿ ಅರ್ಜಿ ಆಹ್ವಾನಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರು ಇದರ ಉಪಯೋಗ ಪಡೆದೊಳ್ಳಬಹುದು.ಹೆಚ್ಚಿನ ಮಾಹಿತಿಗಾಗಿ ಭವಾನಿ ಶಂಭುಲಿಂಗಪ್ಪ (78293 79675), ನೇತ್ರಾ ಮಧುಕರ್ (91643 48699), ಅಕ್ಷಯ್ ಸುರ್ವೆ (96065 81587) ಅವರನ್ನು ಸಂಪರ್ಕಿಸಬಹುದು.

ಕಮರ್ಷಿಯಲ್ ಕಾಂಪ್ಲೆಕ್ಸ್ ಬಾಡಿಗೆಗೆ ಇದೆ



ಎ.ವಿ.ಕೆ. ಕಾಲೇಜ್ ರಸ್ತೆ, ಶ್ರೀರಾಮ ಪಾರ್ಕ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

ನೆಲ ಮಹಡಿ, 1ನೇ ಮಹಡಿ, 2ನೇ ಮಹಡಿ ಬಾಡಿಗೆಗಿವೆ

ಫೋನ್ : 99640 13041

# ಸ್ತ್ರೀ ಸಮಾನತೆಗೆ ಮಿಡಿದ ವಚನ ಸಾಹಿತ್ಯ : ಡಾ. ತಾರಿಣಿ

## ಕದಳಿ ಮಹಿಳಾ ವೇದಿಕೆ ವಾರ್ಷಿಕೋತ್ಸವದಲ್ಲಿ ನಿವೃತ್ತ ಶಿಕ್ಷಕಿ ಸುಮಂಗಲಮ್ಮ ಅವರಿಗೆ 'ಕದಳಿ ಶ್ರೀ' ಪ್ರದಾನ



ದಾವಣಗೆರೆ, ಜ.7 - ಸ್ತ್ರೀ ಸಮಾನತೆ ಬಗ್ಗೆ ಮೊದಲು ಧ್ವನಿ ಎತ್ತಿರುವುದೇ 12ನೇ ಶತಮಾನದ ವಚನ ಸಾಹಿತ್ಯ ಎಂದು ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಸಹಪ್ರಾಧ್ಯಾಪಕಿ ಡಾ. ಆರ್. ತಾರಿಣಿ ಶುಭದಾಯಿನಿ ತಿಳಿಸಿದರು.

ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆಯಿಂದ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ವೇದಿಕೆಯ 16ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಕ್ಕಮಹಾದೇವಿ ಕನ್ನಡದ ಮೊದಲ ಕವಯತ್ರಿ. ಇವರ ಹೋರಾಟವು ಸ್ತ್ರೀಸಮುದಾಯದ ಚಿಂತನೆಯ ದಿಕ್ಕನ್ನೇ ಬದಲಿಸಿತು ಎಂದು ಹೇಳಿದರು.

ಸಂಸಾರಿಗಳೂ ನೈತಿಕ ಚೌಕಟ್ಟಿನ ಮೂಲಕ ಆಧ್ಯಾತ್ಮಿಕ ಚೌಕಟ್ಟನ್ನು ತಲುಪುವ ಬಗೆಯನ್ನು ಆಯ್ದಕ್ಕಿ ಲಕ್ಕಮ್ಮ ಸೇರಿದಂತೆ ಶರಣೆಯರ ಸಂಕುಲವು ತಿಳಿಸಿ ಕೊಟ್ಟಿದೆ ಎಂದರು.

ಮಹಿಳೆಯರಿಗೆ ಪ್ರಕೃತಿ ತಾಯ್ತನದ ಜವಾಬ್ದಾರಿ ನೀಡಿದೆ. ಇಂತಹ ಭಾವನಾತ್ಮಕ ಕಟ್ಟು ಪಾಡುಗಳನ್ನು ಸರಿಯಾಗಿ ನಿಭಾಯಿಸುವ ಜತೆಗೆ ನಮ್ಮ ವ್ಯಕ್ತಿತ್ವ ಮತ್ತು ಕತೃತ್ವ ಶಕ್ತಿಯನ್ನು ನಿರೂಪಿಸಿ ಸಮಾಜದಲ್ಲಿ ಸಾಧಿಸಬೇಕು ಎಂದು ಹೇಳಿದರು.

'ಕದಳಿಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ನಿವೃತ್ತ ಶಿಕ್ಷಕಿ ಸುಮಂಗಲಮ್ಮ ಅವರು, ಅಕ್ಕಮಹಾದೇವಿ ಅವರು ಐಕ್ಯವಾದ ಸ್ಥಳದ ಹೆಸರಿನಲ್ಲಿ ವೇದಿಕೆ ನಡೆಸುತ್ತಿರುವ ವಿವಿಧ ಕಾರ್ಯಗಳು ಶ್ಲಾಘನೀಯವಾಗಿದೆ ಎಂದರು.

ವಚನಕಾರರು, ಸಮಾಜದಲ್ಲಿ ಮಹಿಳೆಯರ ಬಗ್ಗೆ ಇರುವ ತಾತ್ಸಾರ ಮನೋಭಾವವನ್ನು ಹೋಗಲಾಡಿಸಿದ್ದಾರೆ ಎಂದ ಅವರು, ಇಂದಿನ ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ನಶಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಕದಳಿ ವೇದಿಕೆ ಸದಸ್ಯಿನಿಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಅಭಿನಂದನಾ ಕಾರ್ಯಕ್ರಮ ಹಾಗೂ ಪದಗ್ರಹಣ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವೇದಿಕೆಯ ಜಿಲ್ಲಾಧ್ಯಕ್ಷೆ ಗಾಯತ್ರಿ ವಸ್ತ್ರದ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಪ್ರಮೀಳ ನಟರಾಜ್, ಕಿರುವಾಡಿ ಗಿರಿಜಮ್ಮ, ಸುಮಂಗಳಾ, ಮಮತಾ ನಾಗರಾಜ್, ಚಂದ್ರಿಕಾ ಮಂಜುನಾಥ್, ಸಾವಿತ್ರಮ್ಮ, ಯಶಾ, ಸಿ.ಜಿ. ದಿನೇಶ್ ಇತರರು ಇದ್ದರು.


## ನಂದಿತಾವರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನೂತನ ನಿರ್ದೇಶಕರುಗಳ ಆಯ್ಕೆ

ದಿನಾಂಕ 06.1.2025ರಂದು ನಡೆದ ಹರಿಹರ ತಾ. ನಂದಿತಾವರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಈ ಕೆಳಕಂಡವರು ನೂತನ ನಿರ್ದೇಶಕರುಗಳಾಗಿ ಮುಂದಿನ 5 ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ.




ಪಿ. ಗದಿಗೆಪ್ಪ ನಂದಿತಾವರೆ | ಎನ್.ಪಿ. ಶಿವನಗೌಡ ನಂದಿತಾವರೆ | ಎನ್. ಎಂ. ರಾಜು ನಂದಿತಾವರೆ | ಎಂ. ವೆಂಕಟೇಶ್ ನಂದಿತಾವರೆ | ಬಿ.ಜಿ. ತಿಮ್ಮನಗೌಡ ಎಕ್ಕೆಗೊಂದಿ | ಎ.ಕೆ. ನಾಗಪ್ಪ ನಂದಿತಾವರೆ



ಜಿ.ಎಸ್. ಮಹಾಂತೇಶ್ ಎಕ್ಕೆಗೊಂದಿ | ಎನ್. ಎಂ. ಶಂಭಯ್ಯ ನಂದಿತಾವರೆ | ಶ್ರೀಮತಿ ಎಂ. ನಾಗರತ್ನಮ್ಮ ಎಕ್ಕೆಗೊಂದಿ | ಶ್ರೀಮತಿ ಕೆ.ಜಿ. ಕಮಲಮ್ಮ ನಂದಿತಾವರೆ | ಕೆ.ಎನ್. ಹನುಮಗೌಡ ನಂದಿತಾವರೆ

**ಅಭಿನಂದಿಸುವವರು :** ನಂದಿತಾವರೆ, ಎಕ್ಕೆಗೊಂದಿ ಮತ್ತು ಬ್ಯಾಲದಹಳ್ಳಿ ಗ್ರಾಮಗಳ ಗ್ರಾಮಸ್ಥರು ಮತ್ತು ಮುಖ್ಯ ಕಾರ್ಯನಿರ್ವಾಹಣಧಿಕಾರಿಗಳು ಸಿಬ್ಬಂದಿ ವರ್ಗ, ಪಿಎಸಿಎಸ್, ನಂದಿತಾವರೆ.


## ಆರ್.ಜಿ.ಎಸ್. ನಗರದ ಶ್ರೀನಿವಾಸ ಮಂದಿರದಲ್ಲಿ 10ಕ್ಕೆ ವೈಕುಂಠ ಏಕಾದಶಿ



ದಾವಣಗೆರೆ, ಜ. 7 - ಆವರಗೆರೆ ರಿಲಯನ್ಸ್ ಪೆಟ್ರೋಲ್ ಬಂಕ್ ಹಿಂಭಾಗದಲ್ಲಿರುವ ಆರ್.ಜಿ.ಎಸ್. ನಗರದಲ್ಲಿರುವ ಶ್ರೀನಿವಾಸ ಮಂದಿರದಲ್ಲಿ ಇದೇ ದಿನಾಂಕ 10ರಂದು ವೈಕುಂಠ ಏಕಾದಶಿ ನಡೆಯಲಿದೆ. ಅಂದು ಬೆಳಿಗ್ಗೆಯಿಂದ ವಿಶೇಷ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ವಿಶೇಷ ಪೂಜೆ ಕಾರ್ಯಕ್ರಮಗಳನ್ನು ಏರ್ಪಡಿ ಸಲಾಗಿದೆ. ನಂತರ ಉತ್ತರ ವೈಕುಂಠ ದ್ವಾರದಿಂದ ಸ್ವಾಮಿ ಯ ದರ್ಶನ, ಪ್ರಸಾದ ನಡೆಯಲಿದೆ ಎಂದು ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ .ಶ್ರೀನಿವಾಸ ಮೂರ್ತಿ ತಿಳಿಸಿದ್ದಾರೆ.


## ಜಿಗಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನೂತನ ನಿರ್ದೇಶಕರ ಆಯ್ಕೆ

ದಿನಾಂಕ 05.1.2025ರಂದು ನಡೆದ ಜಿಗಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಈ ಕೆಳಕಂಡವರು ನೂತನ ನಿರ್ದೇಶಕರುಗಳಾಗಿ ಮುಂದಿನ 5 ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ.



ಡಿ.ಹೆಚ್. ಮಂಜುನಾಥ್ ಜಿಗಳಿ | ಎಕ್ಕೆಗೊಂದಿ ರುದ್ರಗೌಡ, ಜಿಗಳಿ | ಪುಟ್ಟಣ್ಣರ ಬಸವರಾಜ್, ಜಿಗಳಿ | ಜಿ.ಪಿ. ಹನುಮಗೌಡ ಜಿಗಳಿ | ಶ್ರೀಮತಿ ಕುಸುಮ ಜಿ.ಎಂ. ಜಯದೇವ, ಜಿಗಳಿ | ಶ್ರೀಮತಿ ರತ್ನಮ್ಮ ಜಿ. ಆನಂದಪ್ಪ, ಜಿಗಳಿ



ಕೆ.ಎಸ್. ವೀರನಗೌಡ ಹಳ್ಳಿಹಾಳ್ | ವಿ. ತಿಮ್ಮನಗೌಡ ಹಳ್ಳಿಹಾಳ್ | ಹೆಚ್.ಎಸ್. ಉಮೇಶ್ ಹಳ್ಳಿಹಾಳ್ | ಶ್ರೀಮತಿ ಕುಸುಮ ವಿ. ಶಿವನಗೌಡ, ಹಳ್ಳಿಹಾಳ್ | ಎ.ಕೆ. ಬಸವರಾಜ್ ಹಳ್ಳಿಹಾಳ್ | ಜಿ.ಎಸ್. ಶಿವರಾಜ್ ಜಿ. ಬೇವಿನಹಳ್ಳಿ

**ಅಭಿನಂದಿಸುವವರು :** ಜಿಗಳಿ, ಜಿ. ಬೇವಿನಹಳ್ಳಿ, ಹಳ್ಳಿಹಾಳ್ ಮತ್ತು ವಡೆಯರ ಬಸಾಪುರ ಗ್ರಾಮಸ್ಥರು ಮುಖ್ಯ ಕಾರ್ಯನಿರ್ವಾಹಣಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಪಿಎಸಿಎಸ್, ಜಿಗಳಿ.

## ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಶ್ಯಾಬನೂರು

## ಹಾರ್ದಿಕ ಅಭಿನಂದನೆಗಳು



ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಎಸ್. ಹಾಲಪ್ಪ ಅವರಿಗೂ, ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಟಿ. ವೀರನಗೌಡ ಅವರಿಗೂ ಹಾಗೂ ನಿರ್ದೇಶಕರುಗಳಾಗಿ ಆಯ್ಕೆಯಾಗಿರುವ ಎನ್.ಆರ್. ಮಂಜುನಾಥ್, ಎಸ್.ಜೆ. ಮಲ್ಲಿಕಾರ್ಜುನ್, ಹೆಚ್. ಶಿವಪ್ಪ, ರಾಜಪ್ಪ, ಟಿ.ವಿ. ತೇಜಪ್ಪ, ಕೆ. ಸುರೇಶ್, ಕೆ. ಗಿರೀಶ್, ಶ್ರೀಮತಿ ಪಿ.ಎನ್. ದಾನಮ್ಮ, ಶ್ರೀಮತಿ ಸಾವಿತ್ರಮ್ಮ ದೇವರಾಜ್, ವಿ.ಬಿ.ಮಂಜುನಾಥ್ ಅವರುಗಳಿಗೂ ಹಾರ್ದಿಕ ಅಭಿನಂದನೆಗಳು.

### ಶ್ಯಾಬನೂರು ಗ್ರಂಥಾಲಯ ಸ್ನೇಹ ಬಳಗ

◆ ಬಿ. ಲಿಂಗರಾಜ್ ◆ ಜಿ.ಹೆಚ್. ಲಿಂಗರಾಜ್ ◆ ಹೆಚ್.ಆರ್. ಲಿಂಗರಾಜ್ ◆ ಕೆ.ಎಂ. ಚಂದ್ರಶೇಖರಪ್ಪ ◆ ಎಂ. ಶಿವಕುಮಾರ್ ◆ ಎಸ್. ರಾಜಣ್ಣ (ಸಣ್ಣಪ್ಪರ) ◆ ಎನ್. ರೇವಣಸಿದ್ದಪ್ಪ ◆ ಕಮದೋಡು ಅಡಿವೆಪ್ಪ ◆ ಬಿ.ನಾಗರಾಜು ◆ ನಿಟುವಳ್ಳಿ ಮಂಜಣ್ಣ ◆ ಎಂ.ಹೆಚ್. ಬಸವರಾಜ್ (ಅಂಗಡಿ) ◆ ಹೆಚ್. ಲಿಂಗಪ್ಪ ◆ ಎ. ಶಿವಕುಮಾರ್ (ಅಜ್ಜಪ್ಪರ) ◆ ಗುಂಟನೂರು ಕಲ್ಲೇಶ್ ◆ ಹಳ್ಳೇರ ಪರಮೇಶ್ವರಪ್ಪ ◆ ಕೆ.ಬಿ. ರುದ್ರೇಶ್ (ಪಾಲಿಕೆ ನಾಮನಿರ್ದೇಶಿತ ಸದಸ್ಯರು) ◆ ಪೂಜಾರ್ ಮಂಜುನಾಥ್

### ಶಿರಮಗೊಂಡನಹಳ್ಳಿ ರಸ್ತೆಯ ಹೊರ ಬೀರಲಿಂಗೇಶ್ವರ ದೇವಸ್ಥಾನ ಸ್ನೇಹ ಬಳಗ

◆ ಜಿ. ಪರಮೇಶ್ವರಪ್ಪ ◆ ಹುಲ್ಲುಮನೆ ಜಯಪ್ಪ ◆ ವಿ.ಬಿ. ಧನ್ಯಕುಮಾರ್ ◆ ಜಿ.ಬಿ. ಸುರೇಶ್ ◆ ಸಾವಕ್ಕರ ಸಿದ್ದೇಶ್ ◆ ಗಿರಿಯವ್ವಳರ ಹನುಮಂತಪ್ಪ ◆ ಸಣ್ಣಪ್ಪರ ಸಿದ್ದೇಶ್ ◆ ಬುಳ್ಳಾಪುರದ ಕಲ್ಲೇಶ್ ◆ ನಿಟುವಳ್ಳಿ ವಾಮದೇವಪ್ಪ ◆ ಟಿ.ಎಂ. ಹರೀಶ್ ◆ ಟಿ.ಎಂ. ಅರುಣ್ ◆ ಟಿ.ಎಂ. ಕಿರಣ್ ◆ ವಿ.ಮಂಜುನಾಥ್ ◆ ಜಿ.ಪಿ. ಕವಿ ◆ ಬಸದರ ಗಿರೀಶ್ ◆ ಬೂದಾಳರ ವಸಂತ್ ಕುಮಾರ್ ◆ ಬೂದಾಳರ ರಮೇಶ್ ◆ ಹಾಲುವರ್ತಿ ನಿಂಗಪ್ಪ ◆ ಬೂದಾಳರ ಬಸವರಾಜ್ ◆ ಬೂದಾಳರ ವಿರೂಪಾಕ್ಷಿ ◆ ಗಿರಿಯಜ್ಜೇರ ಯೋಗೇಶ್ ◆ ಕೊಂಡಜ್ಜಿ ನಾರಪ್ಪ ◆ ಕೊಂಡಜ್ಜಿ ರಾಕೇಶ್ ◆ ಕುಕ್ಕುವಾಡದ ವಿರೂಪಾಕ್ಷಪ್ಪ


## ಶ್ರದ್ಧಾಂಜಲಿ ಕಾರ್ಯಕ್ರಮ

ಶ್ರೀಮತಿ ರತ್ನ ಬಣಕಾರ್ ಮತ್ತು ಪ್ರೊ. ಬಸವಂತಪ್ಪ ಬಣಕಾರ್

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 30-12-2024ನೇ ಸೋಮವಾರ ಬೆಳಗಿನ ಜಾವ ನಮ್ಮ ಪುತ್ರಿ ಮತ್ತು ಡಾ. ಎಂ.ಬಿ. ನಾಗೇಂದ್ರಪ್ಪ, ಜಿಲ್ಲಾ ಸರ್ಜನ್ ಇವರ ಧರ್ಮಪತ್ನಿ



### ಡಾ. ಮಮತಾ ಬಣಕಾರ್

ಪ್ರಾಂಶುಪಾಲರು, ಬಿ.ಎಡ್. ಕಾಲೇಜು.

ಇವರು ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಆ ಪ್ರಯುಕ್ತ ಮೃತರ ಸದ್ಗತಿಗಾಗಿ

'ಶ್ರದ್ಧಾಂಜಲಿ ಕಾರ್ಯಕ್ರಮ'ವನ್ನು

ದಿನಾಂಕ 09-01-2025 ನೇ ಗುರುವಾರ ಮಧ್ಯಾಹ್ನ 12 ಗಂಟೆಗೆ

ಐ.ಎಂ.ಎ. ಹಾಲ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ.

ತಾವೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ

ಶ್ರೀಮತಿ ರತ್ನ ಬಣಕಾರ್ ಮತ್ತು ಪ್ರೊ. ಬಸವಂತಪ್ಪ ಬಣಕಾರ್

ಡಾ. ಎಂ.ಬಿ. ನಾಗೇಂದ್ರಪ್ಪ, ಜಿಲ್ಲಾ ಸರ್ಜನ್, ದಾವಣಗೆರೆ.

ಡಾ. ರವೀಂದ್ರ ಬಣಕಾರ್ ಮತ್ತು ಡಾ. ಮಂಗಳ ಬಣಕಾರ್

ಡಾ. ಸವಿತಾ ಬಣಕಾರ್ ಮತ್ತು ಡಾ. ಸುಮಂತ್ ಕೆ.ಎಸ್.

ಮತ್ತು ಮಕ್ಕಳು ಹಾಗೂ ಬಣಕಾರ್ ಕುಟುಂಬದವರು, ಹನಗವಾಡಿ.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


INSIGHTSIAS INSTAKAS

ಕೆ.ಪಿ.ಎಸ್.ಸಿ ಪ್ರಿಲಿಮ್ಸ್-ಕಮ್-ಮೇನ್ಸ್ ಕೋರ್ಸ್ @ದಾವಣಗೆರೆ

ಬ್ಯಾಚ್ - 03 | ಪ್ರಾರಂಭ: 9ನೇ ಜನವರಿ 2025



KPSC KAS 2022 Toppers at the Insta KAS Felicitation Ceremony

ಕಾರ್ಯಕ್ರಮದ ಅವಧಿ - 7 ರಿಂದ 8 ತಿಂಗಳು | ತರಗತಿಯ ಮಾಧ್ಯಮ - ಇಂಗ್ಲಿಷ್ ಹಾಗು ಕನ್ನಡ

ವೈಶಿಷ್ಟ್ಯತೆಗಳು

- ಇನ್ಸ್ಟಾ ಕೆಎಎಸ್-ದಾವಣಗೆರೆಯಲ್ಲಿ ಮತ್ತು ಇನ್ಸ್ಟಾ ಕೆಎಎಸ್-ಬೆಂಗಳೂರಿನ ಅಧ್ಯಾಪಕರು ಒಂದೇ ಆಗಿರುತ್ತಾರೆ
- ದ್ವಿಭಾಷಾ ಬೋಧನಾ ಮಾಧ್ಯಮ -(ಇಂಗ್ಲಿಷ್ ಮತ್ತು ಕನ್ನಡ)
- ಪೂರ್ವಭಾವಿ ಹಾಗು ಮುಖ್ಯ ಪರೀಕ್ಷೆಗಾಗಿ ಸಂಯೋಜಿತ ತರಗತಿಗಳು
- ಮುಖ್ಯ ಪರೀಕ್ಷೆಗೆ ಉತ್ತರ ಬರೆಯುವ ಅಭ್ಯಾಸಕ್ಕೆ ಒತ್ತು ನೀಡುವುದು
- ವೈಯಕ್ತಿಕ ಮಾರ್ಗದರ್ಶನ ಸೌಲಭ್ಯ
- ಅರ್ಹತಾ ಪತ್ರಿಕೆಗಾಗಿ ರೆಕಾರ್ಡ್ ಮಾಡಿದ ಇಂಗ್ಲಿಷ್ ವ್ಯಾಕರಣ ತರಗತಿಗಳನ್ನು ಒದಗಿಸಲಾಗುತ್ತದೆ
- ಅಧ್ಯಯನ ಸಾಮಗ್ರಿಗಳು ಮತ್ತು ವಿದ್ಯುನ್ಮಾನ ಪ್ರತಿಗಳನ್ನು ಒದಗಿಸಲಾಗುವುದು (ಸಾಫ್ಟ್ ಕಾಪಿ) ಉಚಿತ ಪೂರ್ವಭಾವಿ ಹಾಗು ಮುಖ್ಯ ಪರೀಕ್ಷಾ ಸರಣಿ



ವಿನಯ್ ಸರ್

TIME TABLE

FEE:

Davanagere (Offline): ~~Rs. 50,000/-~~ incl. taxes

₹ 42,500/- till 6th Jan. 2025

Early Bird Offer: 15% DISCOUNT

SUBSCRIBE

ದಾವಣಗೆರೆ ಕಚೇರಿ: #1092, ಜಾಧವ ಕಾಂಪ್ಲೆಕ್ಸ್, ರಿಂಗ್ ರೋಡ್, ನಿಜಲಿಂಗಪ್ಪ ಬಡಾವಣೆ, ಎಜು ಏಷ್ಯಾ ಶಾಲೆ ಎದುರು, ದಾವಣಗೆರೆ, ಕರ್ನಾಟಕ.577004

ಸಂಪರ್ಕ: 08069405206

ಮೇಲ್: support@insightsias.com

www.insightsonindia.com instacourses.insightsonindia.com

ಶಾಖೆಗಳು: ಬೆಂಗಳೂರು | ದೆಹಲಿ | ಹೈದರಾಬಾದ್ | ಶ್ರೀನಗರ | ಧಾರವಾಡ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas